ಸಂಪುಟ/Volume : 46
ಸಂಚಿಕೆ/Issue : 7–8
ಪುಟ/Pages : 16
ಬೆಲೆ/Price : ₹ 15/–

ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಏಪ್ರಿಲ್–ಮೇ 2024 ಮಾಸ ಪತ್ರಿಕೆ

**Akhila Karnataka Shikshaka Samachar | April-May 2024 | Monthly**




A Journal of Karnataka Rajya Madhyamika Shikshaka Sangha (R.)

## ಸಂಪಾದಕೀಯ

ಶೈಕ್ಷಣಿಕ ಸುಗ್ಗಿಕಾಲದ ಮುಕ್ತಾಯ ಹಂತದಲ್ಲಿರುವ ನಾವುಗಳೆಲ್ಲ ಶೈಕ್ಷಣಿಕ ಫಲದ ನಿರೀಕ್ಷೆಯಲ್ಲಿದ್ದೇವೆ. ಈ ಶೈಕ್ಷಣಿಕ ಸಾಲಿನಲ್ಲಿ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿಯು ಪದವಿಪೂರ್ವ ಮತ್ತು ಹತ್ತನೇ ತರಗತಿ ಹಂತದಲ್ಲಿ ಮೂರು ವಾರ್ಷಿಕ ಪರೀಕ್ಷೆಗಳನ್ನು ಮಾಡುತ್ತಿರುವುದು ಮತ್ತು ಬಹುತೇಕ ಮೊದಲನೇ ಹಂತದ ಫಲಿತಾಂಶಗಳೂ ಹೊರಬರುತ್ತಿರುವ ಕಾಲ ಘಟ್ಟದಲ್ಲಿರುವ ನಾವುಗಳೆಲ್ಲ ಶೈಕ್ಷಣಿಕ ಹೊಸ ಚಿತ್ರಣವನ್ನು ಕಾಣುವಂತೆ ಆಗಿದ್ದು, ಈ ಶೈಕ್ಷಣಿಕ ಸಾಲಿನಲ್ಲಿ ಪರೀಕ್ಷಾ ಮಂಡಳಿಯು ಕೈಗೊಂಡ ಅನೇಕ ಪರೀಕ್ಷಾ ಸುಧಾರಣಾ ಕ್ರಮಗಳು ಫಲಿತಾಂಶದ ಗಟ್ಟಿತನಕ್ಕೆ ನಾಂದಿಹಾಡಿದೆ. ಈ ವರ್ಷದ ಮೌಲ್ಯಮಾಪನ ಕಾರ್ಯದಲ್ಲಿದ್ದ ಬಹುತೇಕ ಶಿಕ್ಷಕರ ಅನುಭವ ಪ್ರತಿವರ್ಷಕ್ಕಿಂತಲೂ ಭಿನ್ನವಾಗಿದೆ ಮತ್ತು ಧನಾತ್ಮಕ ಚಿಂತನೆಯಾಗಿ ಹಂಚಿದೆ. ಹೀಗೆ ಕಟ್ಟುನಿಟ್ಟಿನ ಕ್ರಮಗಳು ಮುಂದುವರೆದಲ್ಲಿ ಭವಿಷ್ಯದಲ್ಲಿ ಶೈಕ್ಷಣಿಕ ಕ್ಷೇತ್ರ ಪ್ರಗತಿಯಾಗುವುದರಲ್ಲಿ ಯಾವುದೇ ಸಂಶಯವಿಲ್ಲ.

ಮೇ ಕೊನೆಯ ವಾರದಲ್ಲಿ ಶೈಕ್ಷಣಿಕ ಹೊಸ ವರ್ಷ ಪ್ರಾರಂಭ ವಾಗುವುದು. ಅದಕ್ಕಾಗಿ ಶೈಕ್ಷಣಿಕ ಕ್ಷೇತ್ರದಲ್ಲಿ ಕಾರ್ಯಮಾಡುವವರೆಲ್ಲರೂ ಪೂರ್ವ ಮತ್ತು ಪೂರ್ಣ ತಯಾರಿ ಮಾಡಿಕೊಳ್ಳಬೇಕಿದೆ. ಶಿಕ್ಷಣ ಪ್ರಗತಿಗಾಗಿ ನಮ್ಮ ನಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಪ್ರಯತ್ನಿಸಿದಲ್ಲಿ ಮುಂದಿನ ಕೆಲವೇ ವರ್ಷಗಳು ಶೈಕ್ಷಣಿಕ ಗುಣಮಟ್ಟ ಇನ್ನೂ ಹೆಚ್ಚಾಗುವುದರಲ್ಲಿ ಯಾವುದೇ ಸಂಶಯವಿಲ್ಲ.

ಕಳೆದ ತಿಂಗಳಲ್ಲಿಯೇ ಭಾರತೀಯ ಹೊಸವರ್ಷ ಯುಗಾದಿಯನ್ನು ಸಂಭ್ರಮದಿಂದ ಬರಮಾಡಿಕೊಂಡ ನಾವುಗಳು ಭಾರತೀಯರ ಆರಾಧ್ಯ ದೈವ, ಆದರ್ಶಗಳ ಪ್ರತೀಕವಾಗಿರುವ ಶ್ರೀರಾಮ ನವಮಿಯನ್ನು ಅಯೋಧ್ಯೆಯಲ್ಲಿ ಬಾಲ ರಾಮನ ಹಣೆಯ ತಿಲಕಕ್ಕೆ ಸೂರ್ಯನ ಸ್ಪರ್ಶದೊಂದಿಗೆ ಆಚರಿಸಿದೆವು. ಪ್ರಪಂಚಕ್ಕೆ ಅಹಿಂಸೆಯ ಪಾಠ ಹೇಳಿದ ಮಹಾವೀರ ಜಯಂತಿ ಮತ್ತು ರಾಮಭಕ್ತ ಹನುಮಂತನ ಜಯಂತಿಯನ್ನು ಆಚರಿಸಿ ಸಂಭ್ರಮಿಸಿದೆವು.

ಈ ತಿಂಗಳು ಅಕ್ಷಯ ತೃತೀಯ, ಬುದ್ಧ ಪೂರ್ಣಿಮೆಯನ್ನು ಹಾಗೂ ಭಾರತಮಾತೆಯ ಹೆಮ್ಮೆಯ ಪುತ್ರರಾದ ಶಂಕರ, ರಾಮಾನುಜ ಮತ್ತು ರವೀಂದ್ರನಾಥ ಠಾಕೂರರ ಜಯಂತಿಯನ್ನು ಆಚರಿಸುವ ತವಕದಲ್ಲಿದ್ದೇವೆ. ಈ ಎಲ್ಲ ಹಬ್ಬಗಳು ಮತ್ತು ಜಯಂತಿಗಳು ಭಾರತೀಯ ಸಂಸ್ಕೃತಿಯ ಮತ್ತು ಭಾರತೀಯರ ಹೆಮ್ಮೆಯ ಪ್ರತೀಕವಾಗಿವೆ, ಅವು ನೀಡುವ ಸಂತೋಷಗಳು ನಮಗೆಲ್ಲ ಜೀವನದಲ್ಲಿ ದಾರಿ ತೋರುವ ಮೈಲುಗಲ್ಲುಗಳಲ್ಲವೇ?

ಭಾರತದ ಪ್ರಜಾಪ್ರಭುತ್ವದ ಮೈಲುಗಲ್ಲಾದ ಲೋಕಸಭಾ ಸಾರ್ವತ್ರಿಕ ಚುನಾವಣೆಯು ದೇಶದಾದ್ಯಂತ ಕೆಲ ಹಂತಗಳನ್ನು ಪೂರೈಸಿದ್ದು, ಇನ್ನೂ ಹಲವು ಹಂತಗಳ ಚುನಾವಣೆಯು ಬಾಕಿ ಇರುವುದು ತಮಗೆಲ್ಲ ತಿಳಿದ ವಿಷಯವೇ. ಈ ಸುಸಂದರ್ಭವನ್ನು ಬಳಸಿಕೊಂಡು ಭಾರತೀಯ ಪ್ರಜೆಗಳಾದ ನಾವು ನಮ್ಮ ಮತದಾನದ ಹಕ್ಕನ್ನು ಚಲಾಯಿಸಬೇಕು ಇದು ನಮ್ಮ ಕರ್ತವ್ಯವೂ ಕೂಡ. ನಮ್ಮ ಕರ್ತವ್ಯವನ್ನು ನಾವು ಪರಿಪಾಲಿಸಿದ್ದೇ ಆದರೆ ನಿಜವಾದ ನಾಗರೀಕನಾಗಲು ಸಾಧ್ಯ. ಚುನಾವಣೆಯ ನಂತರ ನಾವು ನಮ್ಮ ಭವ್ಯ ಭಾರತದ ನಾಯಕನನ್ನು ಚುನಾಯಿಸಿದ್ದೇವೆ ಎಂಬ ಹೆಮ್ಮೆ ನಮಗಿದ್ದರೆ ಆಗ ನಮ್ಮ ಪ್ರಜಾ ಧರ್ಮ ಸಾರ್ಥಕವಾದೀತು.

ಸಂಪಾದಕ


## ಸಂಪಾದಕ ಮಂಡಳಿ

ಗೌರವ ಸಂಪಾದಕರು
ಹೆಚ್. ನಾಗಭೂಷಣರಾವ್

ಪ್ರಧಾನ ಸಂಪಾದಕರು ಮತ್ತು ಪ್ರಕಾಶಕರು
ಜೆ. ಎಮ್. ಜೋಶಿ

ವ್ಯವಸ್ಥಾಪಕ ಸಂಪಾದಕರು
ಸಂದೀಪ ಬೂದಿಹಾಳ

ಗೌರವ ಸಲಹೆಗಾರರು
ಚಿದಾನಂದ ಆ. ಪಾಟೀಲ
ಮಮತಾ ಡಿ. ಕೆ.

ಸಂಪಾದಕ ಮಂಡಳಿ
ಎನ್. ನಾಗರಾಜ್
ನಂ. ನಾಗಲಕ್ಷ್ಮಿ
ಸೀತಾಲಕ್ಷ್ಮಿ ಆರ್.

ವಿನ್ಯಾಸಕಾರರು
ಪ್ರೇರಣಾ

ಕಛೇರಿ ವ್ಯವಸ್ಥಾಪಕರು
ವರಲಕ್ಷ್ಮಿ ಕೆ. ಎನ್.


## ಪರಿವಿಡಿ


- ಪ್ರಜಾ ಧರ್ಮ–ರಾಜ ಧರ್ಮ 3
- ಪ್ರಜಾಪ್ರಭುತ್ವದ ಆಧಾರ ಪ್ರಜೆ 4
- ಹಿಂದೂ ಧರ್ಮ ಜೀವನ ಕ್ರಮ 6
- ಅಕ್ಷಯ ತೃತೀಯಾ 7
- ಯುಗಾದಿ – ಹೇಗೆ ? ಯಾರಿಗೆ ? 8
- ಮಕ್ಕಳ ಬೇಸಿಗೆ ರಜೆಯ ಕಲಿಕೆಗಳು 9
- ಶೈಕ್ಷಣಿಕ ಸವಾಲುಗಳನ್ನು ಎದುರಿಸಲು ನಮ್ಮ ತಯಾರಿ ಹೇಗಿರಬೇಕು ? 11
- ಕವನ – ಮರಣಮೃದಂಗ 14
- ಬಸವೇಶ್ವರರು–ಸಾಮಾಜಿಕ ಸಾಮರಸ್ಯದ ಹರಿಕಾರ 15
- ವರದಿಗಳು 16

# ಪ್ರಜಾ ಧರ್ಮ–ರಾಜ ಧರ್ಮ

ನಂ. ನಾಗಲಕ್ಷ್ಮಿ
ನಿವೃತ್ತ ಕನ್ನಡ ಉಪನ್ಯಾಸಕರು,
ಸರ್ಕಾರಿ ಪ.ಪೂ. ಕಾಲೇಜು,
ಬೆಂಗಳೂರು



'ಧರ್ಮ' ಎಂಬ ಸಂಸ್ಕೃತ ಶಬ್ದಕ್ಕೆ ಎಲ್ಲವನ್ನೂ ಧರಿಸುವಂತಹುದು, ತಾಳುವಂತಹುದು, ಎಲ್ಲಕೂ ಆಧಾರಭೂತವಾದದ್ದು ಎಂಬ ಅರ್ಥವಿದೆ. ಅಂದರೆ ಎಲ್ಲರನ್ನೂ, ಎಲ್ಲವನ್ನೂ ಪೋಷಿಸುವಂತಹುದು, ಬಾಳಿಸುವಂತಹುದು ಎಂದರ್ಥ. ಇದು ಮಾನವರ ಚತುರ್ವಿಧ ಪುರುಷಾರ್ಥಗಳಲ್ಲಿ ಮೊದಲನೆಯದೂ ಆಗಿದೆ. ಅಷ್ಟೇ ಅಲ್ಲ, ಸಕಲ ಜೀವರಾಶಿಗಳಲ್ಲಿಯೂ ಪ್ರತಿಯೊಂದು ವರ್ಗಕ್ಕೂ ಅದರದೇ ಆದ ಧರ್ಮವಿರುತ್ತದೆ. ಅದೂ ಸಹ ದೇಶ, ಕಾಲ, ಜೀವಿಗಳಿಗೆ ಸಂಬಂಧಿಸಿದಂತೆ ಕೆಲವು ಸಂದರ್ಭಗಳಲ್ಲಿ ಬದಲಾದರೂ ,ಮತ್ತೆ ಕೆಲವು ಸಂದರ್ಭಗಳಲ್ಲಿ ಆ 'ಧರ್ಮ' ವೆಂಬುದು ಸಾರ್ವಕಾಲಿಕವಾಗಿಯೇ ಉಳಿಯುತ್ತದೆ. ಧರ್ಮದ ಮೂಲಭೂತ ಅಂಶಗಳಾದ ಎಲ್ಲರ ಒಳಿತನ್ನು ಬಯಸುವ ಭೂತದಯೆ, ಅನುಕಂಪ, ಸಹಾಯ, ಸಚ್ಚಾರಿತ್ರ್ಯ ಮುಂತಾದ ಗುಣಗಳು ಎಲ್ಲ ಕಾಲಕ್ಕೂ ಅಗತ್ಯವಾಗಿರುತ್ತವೆ. 'ಧರ್ಮೋ ರಕ್ಷತಿ ರಕ್ಷಿತಃ' ಎಂಬ ಸೂಕ್ತಿಯಂತೆ ಧರ್ಮವನ್ನು ರಕ್ಷಿಸಿದವರನ್ನು ಅದು ರಕ್ಷಿಸುತ್ತದೆ.

ಪ್ರಸ್ತುತ ವಿವೇಚನೆ ಮಾಡಬೇಕಿರುವ ರಾಜಧರ್ಮ–ಪ್ರಜಾಧರ್ಮವೆಂಬ ವಿಷಯವನ್ನು ತೆಗೆದುಕೊಂಡಾಗ:

'ರಾಜಾ ಪ್ರತ್ಯಕ್ಷ ದೇವತಾ' ಎಂಬುದು ನಮ್ಮಲ್ಲಿ ಪರಂಪರೆಯಿಂದಲೂ ನಂಬಿಕೊಂಡು ಬಂದ ಭಾವನೆ. ಹಾಗೆಯೇ ರಾಜನಾದವನು ಪ್ರಜೆಗಳಾದ ತಮ್ಮನ್ನೆಲ್ಲ ತನ್ನ ಮಕ್ಕಳಂತೆ ಪ್ರೀತಿಯಿಂದ ಯಾವ ರೀತಿಯಲ್ಲಿ ರಕ್ಷಿಸುತ್ತಾನೆಯೋ ಅದೇ ರೀತಿಯಲ್ಲಿ ತಾವೂ ಸಹ ಅವನ ಹಿತಕ್ಕಾಗಿ ತಮ್ಮ ತನು, ಮನ, ಧನ ಅಂದರೆ ಸರ್ವಸ್ವವನ್ನೂ ತ್ಯಾಗ ಮಾಡಲು ಸಿದ್ಧರಿರುತ್ತಿದ್ದರೆಂಬುದಕ್ಕೂ ಇತಿಹಾಸವು ಸಾಕ್ಷಿಯಾಗುತ್ತದೆ. ದೇಶದ ಉದ್ದಗಲಕ್ಕೂ ಸಾಕ್ಷಿಯಾಗಿರುವ ಶಾಸನಗಳು ಇದನ್ನು ನಿರೂಪಿಸುತ್ತವೆ. ಪುರಾಣಗಳಲ್ಲಿ ಸಹ ಈ ಅಂಶವನ್ನು ತಿಳಿಸುವ ದೃಷ್ಟಾಂತಗಳಿವೆ. ಅಂದರೆ ರಾಜನಾದವನು ಪಾಲಿಸಲೇಬೇಕಾದ ಕರ್ತವ್ಯಗಳಿರುವಂತೆಯೇ ಪ್ರಜೆಗಳಾದವರಿಗೂ ಸಹ ಅವರು ಮಾಡಲೇಬೇಕಾದ ಕರ್ತವ್ಯಗಳಿರುತ್ತವೆ. ರಾಜನಾದವನು ಅನ್ಯಾಯ, ಅಧರ್ಮದ ದಾರಿಯಲ್ಲಿ ನಡೆಯುತ್ತಿರುವುದು ಗಮನಕ್ಕೆ ಬಂದಲ್ಲಿ ಅಂತಹ ರಾಜನನ್ನು ಅಧಿಕಾರದಿಂದ ಕೆಳಗಿಳಿಸಿದ ಹಲವಾರು ಉದಾಹರಣೆಗಳೂ ಸಹ ನಮ್ಮ ಮುಂದಿವೆ. ಏಕೆಂದರೆ ರಾಜನಾದವನಿಗೆ ಸ್ವಹಿತಕ್ಕಿಂತಲೂ ಪ್ರಜಾಹಿತ ರಕ್ಷಣೆ ಮುಖ್ಯ ಕರ್ತವ್ಯವಾಗಿರುತ್ತದೆ.

ಈ ಸಂದರ್ಭದಲ್ಲಿ ರಾಮಾಯಣದಲ್ಲಿ ಶ್ರೀರಾಮನು ಸ್ವಸಂತೋಷವನ್ನು ಬದಿಗೊತ್ತಿ ಪ್ರಜೆಗಳ ಅಭಿಮತಕ್ಕೆ ಪ್ರಾಶಸ್ತ್ಯಕೊಟ್ಟದ್ದನ್ನು ಸ್ಮರಿಸಬಹುದು. ಪತಿಧರ್ಮಕ್ಕಿಂತಲೂ ರಾಜಧರ್ಮ, ಅಂದರೆ ಪ್ರಜೆಗಳ ಮನವನ್ನು ಸಂತೋಷಪಡಿಸಲು ಪತ್ನೀತ್ಯಾಗದ ನಿರ್ಧಾರಮಾಡಿದ್ದನ್ನು ನೆನೆಯಬಹುದು. ಅಂದರೆ ರಾಜಧರ್ಮವನ್ನು ಪಾಲಿಸುವಾಗ ಆತನು ಯಾವುದೇ ರೀತಿಯಿಂದಲೂ ಪ್ರಜೆಗಳಲ್ಲಿ ತನ್ನ ಬಗ್ಗೆ ಅಸಮಾಧಾನವಾಗಲೀ, ಅಸಂತುಷ್ಟಿಯಾಗಲೀ, ತನ್ನ ನಡವಳಿಕೆಯ ಕುರಿತು ಭಿನ್ನಾಭಿಪ್ರಾಯವೋ, ಒಡಕು ಧ್ವನಿಯೋ ಬಾರದಿರುವಂತೆ ಎಚ್ಚರವಹಿಸಬೇಕೆನ್ನುವುದೂ ಸೇರಿರುತ್ತದೆ. ಇದನ್ನೇ ಅಂದರೆ ಸ್ವಾರ್ಥ ತ್ಯಾಗವನ್ನೇ ನಮ್ಮ ಜಾನಪದ ಕಥೆಗಳಲ್ಲಿಯೂ ಕಾಣುತ್ತೇವೆ. ಊರ ಗೌಡನು ಕೆರೆಯಲ್ಲಿ ನೀರು ಬರಲಿಲ್ಲವೆಂದಾಗ ಗರ್ಭಿಣಿಯನ್ನು ಬಲಿಕೊಟ್ಟರೆ ಕೆರೆ ತುಂಬುವುದೆಂದು ಜ್ಯೋತಿಷಿಗಳು ಹೇಳುತ್ತಾರೆ. ಆಗ ಗೌಡನು ತನ್ನ ಮನೆ ಬೆಳಗುತ್ತಿದ್ದ ತುಂಬು ಗರ್ಭಿಣಿ ಸೊಸೆಯನ್ನೇ ಬಲಿಯಾಗಿಸಲು ನಿರ್ಧರಿಸುತ್ತಾನೆ. ಅಲ್ಲಿ ಊರ ಹಿತ ಮುಖ್ಯವಾಗಿ ಸ್ವಹಿತ ಗೌಣವಾಗುತ್ತದೆ. ಮಹಾಭಾರತದಲ್ಲಿ ಸಹ

> **ತ್ಯಜೇದೇಕಂಕುಲ ಸ್ಯಾರ್ಥೇ ಗ್ರಾಮಸ್ಯಾರ್ಥೇ ಕುಲಂತ್ಯಜೇತ್।**
> **ಗ್ರಾಮಂ ಜನಪದಸ್ಯಾರ್ಥೇ ಆತ್ಮಾರ್ಥೇ ಪೃಥಿವೀಂತ್ಯಜೇತ್ ।**
> (ಹಿತೋಪದೇಶದಲ್ಲಿದೆ.)

ರಾಜನಾದವನಿಗೆ ತನ್ನ, ತನ್ನ ಪರಿವಾರದ ಹಿತಕ್ಕಿಂತಲೂ ತನ್ನ ಪ್ರಜೆಗಳ ಯೋಗಕ್ಷೇಮವನ್ನು ನೋಡಿಕೊಳ್ಳುವುದು ಮುಖ್ಯವಾಗುತ್ತದೆ. ಅದೇ ರಾಜಧರ್ಮವೆನಿಸಿಕೊಳ್ಳುತ್ತದೆ. ಆದರೆ ಯಾವಾಗ ರಾಜನಾದವನು ಅಡ್ಡ ದಾರಿಯನ್ನು ಹಿಡಿಯುತ್ತಾನೆಯೋ ಆಗ ಪ್ರಜೆಗಳು ದಂಗೆಯೇಳುತ್ತಿದ್ದ ಮತ್ತು ಕೆಲವು ಸಂದರ್ಭಗಳಲ್ಲಿ ಆಡಳಿತವು ಸೂತ್ರ ತಪ್ಪಿ, ದುರ್ಬಲವಾದಾಗ ಶತ್ರುಗಳು ಆಕ್ರಮಿಸಿ ರಾಜ್ಯವನ್ನು ತಮ್ಮ ವಶಪಡಿಸಿಕೊಳ್ಳುತ್ತಿದ್ದ ಉದಾಹರಣೆಗಳೂ ನಮ್ಮ ಚರಿತ್ರೆಯಲ್ಲಿ ದಾಖಲಾಗಿವೆ. ಅಂದರೆ ರಾಜನಾದವನು ತನ್ನ ರಾಜ್ಯದ ಆಂತರಿಕ ಬೆಳವಣಿಗೆ, ರಕ್ಷಣೆಗೆ ಮಹತ್ತ್ವ ಕೊಡುವಂತೆಯೇ ಬಾಹ್ಯದ ಆಕ್ರಮಣಗಳತ್ತಲೂ ಸದಾ ಕಾಲ ಜಾಗೃತನಾಗಿರಬೇಕೆಂದು ರಾಜ ಧರ್ಮ ಹೇಳುತ್ತದೆ. ಪ್ರಜೆಗಳಲ್ಲಿ ಯಾವುದೇ ತಾರತಮ್ಯ ತೋರದೆ ನ್ಯಾಯದ ಪಕ್ಷಪಾತಿಯಾಗಿರಬೇಕಾದುದು ಅವನ ಕರ್ತವ್ಯವಾಗಿರುತ್ತದೆ. ಅವೆಲ್ಲದರೊಂದಿಗೆ ಆತನು ತನ್ನ ಪ್ರಜೆಗಳಿಗೆ ಆದರ್ಶಪ್ರಾಯ ನಾಗಿರಬೇಕಾದುದೂ ಸಹ ಅತಿಮುಖ್ಯ. 'ಯಥಾ ರಾಜಾ ತಥಾಪ್ರಜಾ' ಎನ್ನುವಂತೆ ನಾಯಕನ ವ್ಯಕ್ತಿತ್ವ ಯಾವಾಗಲೂ ಪ್ರಜೆಗಳು ನೋಡಿ ಅನುಸರಿಸುವಂತಿರಬೇಕು, ಅದು ಸನ್ನಡತೆಯಿಂದ ಕೂಡಿರಬೇಕು. ಹಾಗಾಗಿ ರಾಜನಾದವನು ಸದಾ ಕಾಲಕ್ಕೂ ತನ್ನ ನಡತೆಯ ಕುರಿತು ಜಾಗೃತನಾಗಿರಬೇಕು. ಆಗ ಮಾತ್ರ ಅವನಿಗೆ ಪ್ರಜೆಗಳ ತಪ್ಪುಗಳನ್ನು ಗುರುತಿಸಿ ಶಿಕ್ಷಿಸುವ ನೈತಿಕ ಬಾಧ್ಯತೆಯಿರುತ್ತದೆ. ಪ್ರಶ್ನಿಸುವ ಅಧಿಕಾರವಿರುತ್ತದೆ.

ಮಹಾಭಾರತದ ವಿದುರ ನೀತಿಯಲ್ಲಿ ರಾಜನಾದವನ ನಡವಳಿಕೆ ಹೇಗಿರಬೇಕೆಂಬುದನ್ನು ಬಹಳ ಚೆನ್ನಾಗಿ ಹೇಳಿದೆ. ಅದು ಎಲ್ಲ ಕಾಲಕ್ಕೂ ನಾಯಕನಾದವನ ವ್ಯಕ್ತಿತ್ವ ಹೇಗಿರಬೇಕೆಂಬುದನ್ನು ಸೂಚಿಸುತ್ತದೆ. ಬೇರೆಯವರನ್ನು ವಂಚಿಸದ, ದಕ್ಷನಾದ, ಕೃತಜ್ಞನಾದ, ಬುದ್ಧಿವಂತನಾದ, ನಿಷ್ಕಪಟನಾದ ರಾಜನು ಸದಾಕಾಲಕ್ಕೂ ಬೆಂಬಲಿಗರನ್ನು ಹೊಂದಿರುತ್ತಾನೆ. ಧೈರ್ಯ, ಮನೋನಿಗ್ರಹ, ಇಂದ್ರಿಯ ಸಂಯಮ, ದಯೆ, ಪಾವಿತ್ರ್ಯ, ಸುಮಧುರವಾದ ಮಾತು, ಮಿತ್ರರಿಗೆ ದ್ರೋಹಮಾಡದಿರುವುದು –ಈ ಏಳು ಗುಣಗಳು ಅವನಿಗೆ

ಪುಟ 13 ಕ್ಕೆ ➢

# ಪ್ರಜಾಪ್ರಭುತ್ವದ ಆಧಾರ ಪ್ರಜೆ





**ಹೆಚ್. ನಾಗಭೂಷಣ್ ರಾವ್**
**ಪೋಷಕರು**
**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ**

ಭಾರತದಲ್ಲಿ ಪ್ರಜಾಪ್ರಭುತ್ವ ಇತ್ತೇ? ಇಲ್ಲವೇ? ಪ್ರಜಾಪ್ರಭುತ್ವ ನಮ್ಮ ಸ್ವಭಾವಕ್ಕೆ ಒಗ್ಗುವುದೇ? ಇತ್ಯಾದಿ ಅನೇಕ ಚರ್ಚೆಗಳು ಏಕೆ ಹುಟ್ಟಿಕೊಳ್ಳುತ್ತವೆ ಎಂದರೆ ನಮ್ಮ ಜನ ಪಾರ್ಕ್‌ಗಳಲ್ಲಿ, ಹೋಟೆಲ್‌ಗಳಲ್ಲಿ ಕೂತು ಮತದಾನದ ಬಗ್ಗೆ, ಅಭ್ಯರ್ಥಿಗಳ ಬಗ್ಗೆ ಗಂಟೆಗಟ್ಟಲೆ ಹರಟುತ್ತಾರೆ. ಆದರೆ ಈ ರೀತಿ ಚರ್ಚಿಸುವವರು ಮತದಾನದ ದಿನ ಮಾತ್ರ ಮಲಗಿ ನಿದ್ದೆ ಮಾಡುತ್ತಾರೆ. ಚುನಾವಣಾ ಪ್ರಾಧಿಕಾರ ಎಷ್ಟೇ ಪ್ರಯತ್ನಪಟ್ಟರು, ನಮ್ಮಲ್ಲಿ ಮತದಾನದ ಪ್ರಮಾಣ ಮಾತ್ರ ಶೇಕಡಾ70 ಅನ್ನು ದಾಟುವುದಿಲ್ಲ. ಕಾರಣ ಏನಿರಬಹುದು? ಇದನ್ನು ವಿಶ್ಲೇಷಿಸುವ ಮೊದಲು ನಮ್ಮ ದೇಶದಲ್ಲಿ ಪ್ರಭಾಪ್ರಭುತ್ವ ಇತ್ತೇ? ಪ್ರಜಾಪ್ರಭುತ್ವದ ಮೂಲತತ್ವ ಯಾವುದು? ಇದರ ಬಗ್ಗೆ ತಿಳಿಯೋಣ.

ಸಾವಿರಾರು ವರ್ಷಗಳ ಹಿಂದೆಯೇ ಈ ದೇಶದಲ್ಲಿ ಪ್ರಜಾಪ್ರಭುತ್ವದ ಮೂಲ ಚಿಂತನೆ ಪ್ರಾರಂಭವಾಗಿತ್ತು. ನಮ್ಮ ದೇಶದಲ್ಲಿ ಅನೇಕ ಗಣರಾಜ್ಯಗಳು ಇದ್ದುವು ಎಂಬುದಕ್ಕೆ ಅನೇಕ ದಾಖಲೆಗಳು ಸಿಗುತ್ತವೆ. ಬುದ್ಧನ ಕಾಲದ 'ಲಿಚ್ಚವಿ' ಪ್ರಪಂಚದ ಮೊದಲ ಗಣರಾಜ್ಯ ಎಂದು ನಂಬಲಾಗುತ್ತದೆ. "ಪ್ರಜಾಪ್ರಭುತ್ವದಲ್ಲಿ ಉತ್ತಮರಾದವರಿಗೆ ಆಡಳಿತದ ಹೊಣೆ ಹೊರೆಸುವುದು, ಅವರು ಸಮಸ್ತ ಪ್ರಜೆಗಳ ಕಲ್ಯಾಣವನ್ನು ಬಯಸುವುದು, ಸ್ವಲಾಭವನ್ನು ಚಿಂತಿಸದೆ ಪ್ರಜೆಗಳ ಸೇವೆಗೆ ಸಿಕ್ಕ ಅವಕಾಶವೆಂದು ಭಾವಿಸಿ, ಅದರಂತೆ ನಡೆದುಕೊಳ್ಳುವುದು, ಈ ಹಲವು ಸಂಗತಿಗಳು ಪ್ರಜಾರಾಜ್ಯದ ಮೂಲತತ್ವ" ಎನ್ನಬಹುದು.

ಈ ಎಲ್ಲ ಸಂಗತಿಗಳು ನಮ್ಮ ದೇಶದ ಆಚರಣೆಯಲ್ಲಿ ಇದ್ದುವು ಎಂಬುದಕ್ಕೆ ಒಂದೆರಡು ಉದಾಹರಣೆಗಳು:–

ಮೊದಲನೆಯದಾಗಿ:– ಭಾರತ ಹಳ್ಳಿಗಳಿಂದ ಕೂಡಿದ ದೇಶ. ಹಳ್ಳಿಗಳ ಜೀವನಾಧಾರ ಕೃಷಿ. ಅಂದರೆ ಹಳ್ಳಿಗಳ ಬಹುಸಂಖ್ಯಾತರು ಕೃಷಿಕರು. ಹಳ್ಳಿಗೊಬ್ಬ ಪಟೇಲ, ಓರ್ವ ಶ್ಯಾನುಭೋಗ. ಪಟೇಲ, ಶ್ಯಾನುಭೋಗರು ಹಳ್ಳಿಗಳ ಯೋಗಕ್ಷೇಮದ ಬಗ್ಗೆ ಚಿಂತಿಸುತ್ತಿದ್ದರು. ಜನರಲ್ಲಿ ಪರಸ್ಪರ ಸಹಕಾರ ಭಾವನೆ ಇರುತ್ತಿತ್ತು. ಕಷ್ಟ, ಸುಖಗಳಲ್ಲಿ ಹಳ್ಳಿಗರು ಒಗ್ಗೂಡಿ ಪಟೇಲ, ಶ್ಯಾನುಭೋಗರ ನೇತೃತ್ವದಲ್ಲಿ ಪರಸ್ಪರ ಚರ್ಚಿಸಿ, ಸರ್ವಸಮ್ಮತಿಯ ನಿರ್ಣಯಕ್ಕೆ ಬರುತ್ತಿದ್ದರು. ಈ ಪದ್ಧತಿ ಸಹಸ್ರಾರು ವರ್ಷಗಳಿಂದ ಅನುಚಾರವಾಗಿ ನಡೆದುಕೊಂಡು ಬರುತ್ತಿತ್ತು. ಅಲ್ಲಿ ಜಾತಿ, ಜಾತಿಗಳ ನಡುವೆ ಜಗಳ, ವೈಷಮ್ಯವಿರುತ್ತಿರಲಿಲ್ಲ.

ಎರಡನೆಯದಾಗಿ:– ನಮ್ಮ ಪರಿವಾರ ಪದ್ಧತಿ, ನಮ್ಮಲ್ಲಿ ಕೂಡು ಕುಟುಂಬ ವ್ಯವಸ್ಥೆ ಇತ್ತು. ಒಂದು ಕುಟುಂಬವೆಂದರೆ ಸಹಜವಾಗಿ ಹತ್ತಿಪ್ಪತ್ತು ಜನರು ಒಗ್ಗೂಡಿ ಇರುತ್ತಿದ್ದರು. ಹಿರಿಯಜ್ಜ ಯಜಮಾನ. ಮನೆಯಲ್ಲಿ ಆರೇಳು ಹೆಣ್ಣು ಮಕ್ಕಳಿದ್ದರೂ, ಅವರಲ್ಲಿ ಪರಸ್ಪರ ಜಗಳ, ಕದನಗಳು ಮನೆಯ ಯಜಮಾನನ ನೇತೃತ್ವದಲ್ಲಿ ಒಟ್ಟಿಗೆ ಕೂತು ಯಾವುದೇ ಸಮಸ್ಯೆ ಇದ್ದರೂ ಚರ್ಚಿಸುತ್ತಿದ್ದರು. ಹಲವು ಅಭಿಪ್ರಾಯಗಳು ಬಂದರೂ, ಸರ್ವ ಸಮ್ಮತವಾಗಿ ಕುಟುಂಬಕ್ಕೆ ಒಳಿತಾಗುವಂಥ ನಿರ್ಣಯ ತೆಗೆದುಕೊಳ್ಳುತ್ತಿದ್ದರು. ಈ ಮೂಲ ತತ್ವದ ಆಧಾರದ ಮೇಲೆ ನಮ್ಮ ಜನಜೀವನ ನಡೆದುಬರುತ್ತಿತ್ತು.

ಪಾಶ್ಚಾತ್ಯರಲ್ಲೂ ಡೆಮಾಕ್ರಸಿ ಹುಟ್ಟುಕೊಂಡಿದ್ದು ಐದು ನೂರು ವರ್ಷಗಳ ಕೆಳಗೆ ಮಾತ್ರ. ಭಾರತ ಪಾಶ್ಚಾತ್ಯರ ಆಕ್ರಮಣಕ್ಕೆ ಒಳಗಾದಾಗ ಅವರು ತಂದ ಪದ್ಧತಿ ಇಲ್ಲೂ ಪ್ರಾರಂಭವಾಯಿತು. ಪ್ರತಿಯೊಬ್ಬ ಪ್ರಜೆಗೂ ತನ್ನ ಮನದಿಚ್ಛೆ ಪ್ರಕಟಿಸುವ ಅವಕಾಶ ಲಭ್ಯವಾಯಿತು. ಅದನ್ನು ಮತದಾನವೆಂದು ಕರೆದೆವು. ಡೆಮಾಕ್ರಸಿಗೆ 'ಪ್ರಜೆಗಳಿಂದ, ಪ್ರಜೆಗಳಿಗಾಗಿ, ಪ್ರಜೆಗಳಿಗೋಸ್ಕರ' ಎಂದು ಅಮೆರಿಕೆಯ ಅಧ್ಯಕ್ಷನಾಗಿದ್ದ ಅಬ್ರಾಹಂ ಲಿಂಕನ್ ವ್ಯಾಖ್ಯಾನಿಸಿದ್ದಾನೆ.

ಪ್ರಪಂಚದಲ್ಲಿ ಪ್ರಜಾಪ್ರಭುತ್ವವಿರುವ ರಾಷ್ಟ್ರಗಳಲ್ಲಿ ಭಾರತದ ಸ್ಥಾನ ಮೊದಲನೆಯದು. 140 ಕೋಟಿ ಜನಸಂಖ್ಯೆಯ ಭಾರತದಲ್ಲಿ ಮತದಾನದ ಹಕ್ಕನ್ನು ಹೊಂದಿರುವ ಜನಸಂಖ್ಯೆಯೇ ಒಂದು ನೂರುಕೋಟಿ! ಆದರೆ ಮತದಾನ ಮಾಡುವ ಸಮಯ ಬಂದಾಗ ಬಹುತೇಕ ಜನರೂ ಮತದಾನ ಮಾಡದೆ ತಟಸ್ಥರಾಗಿ ಉಳಿಯುತ್ತಾರೆ, ಇದಕ್ಕೆ ಕಾರಣಗಳನ್ನು ಹುಡುಕೋಣ.

- ಮತದಾನ ತಮ್ಮ ಕರ್ತವ್ಯ ಎಂಬ ಅರಿವಿಲ್ಲದಿರುವುದು.
- ಯಾರು ಗೆದ್ದರೇನು? ಯಾರು ಸೋತರೇನು? ನನಗೇನು ಲಾಭವಾಗದು ಎಂಬ ಸ್ವಾರ್ಥ.
- ರಾಜ್ಯಗಳಿಂದ, ರಾಜ್ಯಗಳಿಗೆ ವಲಸೆ ಹೋಗುವುದು,
- ನಗರಗಳಲ್ಲಿ ಮತದಾರರ ನಿರಾಸಕ್ತಿ.
- ಯುವ ಮತದಾರರಲ್ಲಿನ ನಿರಾಸಕ್ತಿ.

ಹಾಗಾದರೆ ಮತದಾನದ ಬಗ್ಗೆ ಆಸಕ್ತಿ ಮೂಡಿಸುವುದು ಹೇಗೆ? ಇದಕ್ಕಾಗಿ ತೆಗೆದುಕೊಳ್ಳಬಹುದಾದ ಉಪಕ್ರಮಗಳೇನು?

ಪುಟ 5 ಕ್ಕೆ ➢

➢ ಪುಟ 4 ರಿಂದ..... ಪ್ರಜಾಪ್ರಭುತ್ವದ ಆಧಾರ

ಚುನಾವಣಾ ಆಯೋಗವು ಈ ನಿಟ್ಟಿನಲ್ಲಿ ಹಲವು ರೀತಿಯ ಪ್ರಯತ್ನಗಳನ್ನು ಮಾಡಿದೆ ಅದರಲ್ಲಿ ಮುಖ್ಯವಾದುದು

1) ದೃಶ್ಯ, ಶ್ರವಣ, ಮುದ್ರಣ ಮಾಧ್ಯಮಗಳ ಮೂಲಕ ಮತದಾನದ ಮಹತ್ವವನ್ನು ತಿಳಿ ಹೇಳುವುದು.

2) ಸಮಾಜದ ಪ್ರತಿಷ್ಠಿತ ವ್ಯಕ್ತಿಗಳು ಮತದಾನವನ್ನು ತಪ್ಪದೇ ಮಾಡುವಂತೆ ವಿನಂತಿಸಿಕೊಳ್ಳುವುದು.

3) ಅನೇಕ ಎನ್‌ಜಿಒಗಳ ಮೂಲಕ ಪ್ರಚಾರ, ಆದರೆ ಈ ಎಲ್ಲ ಪ್ರಯತ್ನಗಳು ತಾತ್ಕಾಲಿಕ ಮಾತ್ರ. ಮತದಾನಕ್ಕೆ ಶಾಶ್ವತ ಪ್ರೇರಣೆ ನೀಡಲಾರವು.

ಪ್ರಜಾಪ್ರಭುತ್ವದ ಉಳಿಕೆಗಾಗಿ ಶಾಶ್ವತವಾದ ಪ್ರಯತ್ನ ಆಗಬೇಕಿದೆ. ಅದೆಂದರೆ

1) ಚುನಾವಣೆಗೆ ನಿಲ್ಲುವ ಅಭ್ಯರ್ಥಿಗಳಿಗೆ ಕೆಲವು ಕಟ್ಟುಪಾಡು ಗಳಿರಬೇಕು ಎ) ವಿದ್ಯಾರ್ಹತೆ ಬಿ) ಯಾವುದಾದರೂ ರೀತಿ ಸಮಾಜ ಸೇವೆ ಮಾಡಿರುವುದಕ್ಕೆ ಪುರಾವೆ ಒದಗಿಸಬೇಕು ಸಿ) ಚುನಾಯಿತನಾದ ನಂತರ ಮರುಚುನಾವಣೆಯ ಅವಧಿಯಲ್ಲಿ ಗಳಿಸಿದ ಆಸ್ತಿಯ ಪ್ರಮಾಣ ಪರಿಶೀಲಿಸಬೇಕು. ಗಳಿಕೆ ಹೆಚ್ಚಾಗಿದ್ದಲ್ಲಿ ಅವನು ಚುನಾವಣೆಗೆ ನಿಲ್ಲಲು ಅನರ್ಹನೆಂದು ಘೋಷಿಸಬೇಕು. (ಇದಂತೂ ಬಹಳ ಮುಖ್ಯವಾದದ್ದು. ಅನೇಕರು ಚುನಾವಣೆಗೆ ನಿಲ್ಲುವುದೇ ಸುಲಭವಾಗಿ ಆಸ್ತಿವಂತರಾಗಲು ಡಿ) ಅಭ್ಯರ್ಥಿಯ ವಿರುದ್ಧ ಯಾವುದೇ ಬಗೆಯ ಕ್ರಿಮಿನಲ್ ಕೇಸ್ ಇರಬಾರದು ಇದಲ್ಲಿ ಅವನು ಚುನಾವಣೆಗೆ ನಿಲ್ಲಲು ಅನರ್ಹ. ಇ) ಪೂಜ್ಯ ಡಿ.ವಿ.ಜಿಯವರ ಮಾತಿನಲ್ಲಿ ಹೇಳುವುದಾದರೆ "ಅಭ್ಯರ್ಥಿಯಲ್ಲಿ ಮುಖ್ಯವಾಗಿ ಇರಬೇಕಾದ ಗುಣಗಳು ಅ) ದೇಶಋಣಬುದ್ಧಿ ಆ) ನ್ಯಾಯೋತ್ಸಾಹ ಇ) ಸಾರ್ವಜನಿಕವಾಗಿ ಸ್ವಪ್ರತಿಫಲ ಚಿಂನತೆಗಿಂತ ಮೇಲೇರಿ ಜೀವ ಸಂಸ್ಕಾರಕವಾದ ಧರ್ಮಕ್ರಿಯೆ ಎಂಬ ಪಾರಮಾರ್ಥಿಕತೆ.

2) ಮುಖ್ಯವಾಗಿ ನಮ್ಮ ಶಿಕ್ಷಣ ಪದ್ಧತಿಯಲ್ಲಿ ಬಾಲ್ಯದಿಂದಲೇ ಪ್ರಜಾಪ್ರಭುತ್ವದ ಮಹತ್ವ ಹಾಗೂ ಅದನ್ನು ಆಚರಿಸಬೇಕಾದ ರೀತಿ ನೀತಿ ಇವುಗಳನ್ನು ಪ್ರತಿಹಂತದಲ್ಲಿಯೂ ವಿದ್ಯಾರ್ಥಿಗಳಿಗೆ ಮನದಟ್ಟು ಮಾಡಿಕೊಡಬೇಕು. ಮತದಾನ ನಮ್ಮ ಆದ್ಯ ಕರ್ತವ್ಯ ಎಂಬ ಭಾವವನ್ನು ಅವರಲ್ಲಿ ತುಂಬಬೇಕು. ನಾನು ಕೆಲವು ವರ್ಷಗಳ ಹಿಂದೆ ಅಮೇರಿಕೆಗೆ ಹೋಗಿದ್ದಾಗ, 9 ವರ್ಷದ ನನ್ನ ಮೊಮ್ಮಗಳು ಶಾಲೆಯಿಂದ ಬಂದ ಕೂಡಲೇ "ತಾತ ನೀನು ನನ್ನ ಫ್ಯಾಮಿಲಿಗೆ ಸೇರಿದವನು. ಆದ್ದರಿಂದ ನೀನು ವೈಟ್‌ಹೌಸ್‌ನಲ್ಲಿ (ಅಮೇರಿಕೆಯ ಅಧ್ಯಕ್ಷರ ಮನೆ/ ಕಛೇರಿ) ನನ್ನೊಂದಿಗೆ ಇರಬಹುದು" ಎಂದಳು. ಆಶ್ಚರ್ಯಚಕಿತನಾಗಿ ನಾನು "ವೈಟ್‌ಹೌಸ್‌ಗೆ ನೀನೇಕೆ ಹೋಗುತ್ತೀಯಮ್ಮ" ಎಂದು ಕೇಳಿದೆ. ಆಗ ಅವಳು " ಇಂದು ನಮ್ಮ ತರಗತಿಯಲ್ಲಿ ಉಪಾಧ್ಯಾಯರು ಪ್ರಜಾಪ್ರಭುತ್ವದ ಬಗ್ಗೆ ವಿವರಿಸುತ್ತಿದ್ದರು. ಅಮೇರಿಕೆಯಲ್ಲಿ ಯಾರಾದರೂ ಅಧ್ಯಕ್ಷರಾಗಬಹುದು. ಈವರೆಗೆ ಮಹಿಳೆಯರು ಯಾರೂ ಅಧ್ಯಕ್ಷರಾಗಿಲ್ಲ, ನಿಮ್ಮಲ್ಲಿ ಯಾರುಬೇಕಾದರೂ ಆಗಬಹುದು" ಎಂದರು. ಆಗ ನನ್ನ ಮೊಮ್ಮಗಳು ಕೈಎತ್ತಿ "ಅಧ್ಯಕ್ಷಳು ನಾನಾಗುತ್ತೇನೆ" ಎಂದಳಂತೆ. ಹೀಗೆ ಆ ದೇಶದಲ್ಲಿ ಬಾಲ್ಯದಲ್ಲಿಯೇ ತರಗತಿಗಳಲ್ಲಿ ಪ್ರಜಾಪ್ರಭುತ್ವ, ಚುನಾವಣೆ, ಕರ್ತವ್ಯ ಪ್ರಜ್ಞೆ ಮುಂತಾದವುಗಳನ್ನು ತಿಳಿಹೇಳುತ್ತಾರೆ.

3) ಕೊನೆಯದಾಗಿ ನಮ್ಮಲ್ಲಿರುವ ಬಹುಸಂಖ್ಯೆಯ ಪಕ್ಷಗಳು, ಯಾವುದೇ ಬಗೆಯ "ತತ್ವ ಸಿದ್ಧಾಂತ"ಗಳಿಲ್ಲದೆ ಕೇವಲ ಅಧಿಕಾರ ದಾಹಕ್ಕಾಗಿ ಹುಟ್ಟಿಕೊಂಡ ಪರಿವಾರ ಕೇಂದ್ರಿತ ರಾಜಕೀಯ ಪಕ್ಷಗಳು. ಬಹಳಷ್ಟು ಜನ ಪ್ರಜಾಪ್ರಭುತ್ವದ ಬಗ್ಗೆ ನಿರಾಸಕ್ತಿ ತೋರಲು ಇದೂ ಒಂದು ಮುಖ್ಯವಾದ ಕಾರಣ. ಬಹುಮತ ಪಡೆದ ಸರ್ಕಾರವು ಚುನಾವಣಾ ಆಯೋಗದ ಸಹಕಾರದೊಂದಿಗೆ ಚರ್ಚಿಸಿ ಇಂತಹ ಪಕ್ಷಗಳನ್ನು ನಿರ್ಬಂಧಿಸಲು ಸೂಕ್ತವಾದ ಕಾನೂನನ್ನು ರೂಪಿಸಬೇಕು.

ಇಷ್ಟಾಗಿಯೂ ಮತದಾನ ಪೂರ್ಣ ಪ್ರಮಾಣದಲ್ಲಿ ಆಗಲಾರದು. ಪ್ರಜಾಪ್ರಭುತ್ವದ ಉಗಮ ಸ್ಥಾನವೆಂದು ಹೇಳಿಕೊಳ್ಳುವ ಪಾಶ್ಚಾತ್ಯ ದೇಶಗಳಲ್ಲೇ ಮತದಾನದ ಪ್ರಮಾಣ ಶೇಕಡಾ 60–70ನ್ನು ಮೀರುವುದಿಲ್ಲ.

ಇದು ಹೇಗಾದರೂ ಇರಲಿ. ಸ್ವೀಕೃತ ಆಡಳಿತ ವ್ಯವಸ್ಥೆಯಲ್ಲಿ ಪ್ರಜಾಪ್ರಭುತ್ವವೇ ಶ್ರೇಷ್ಠವೆಂದು ಜನ ಒಪ್ಪಿಕೊಂಡಿದ್ದಾರೆ. ಅದನ್ನು ಉಳಿಸಿ–ಬೆಳೆಸಬೇಕಾದ ಜವಾಬ್ದಾರಿ ಸಾಮಾನ್ಯ ಪ್ರಜೆಯ ಕರ್ತವ್ಯವಾಗಿದೆ. ಅಂಥಾ ಜಾಗೃತ ಪ್ರಜೆಗಳನ್ನು ನಿರ್ಮಿಸಬೇಕಾದ ಜವಾಬ್ದಾರಿ ಸಾಮಾಜಿಕ ಚಿಂತಕರು, ಶಿಕ್ಷಣ ತಜ್ಞರು, ಪ್ರಜ್ಞಾವಂತರ ಮೇಲಿದೆ. ಆ ಕಾಲ ಆದಷ್ಟು ಬೇಗ ಬರಲಿ ಎಂದು ಆಶಿಸೋಣ.

"ಮತದಾರರೇ ಜಾಗೃತರಾಗಿ, ಎಚ್ಚರಗೊಳ್ಳಿ ನಿಮ್ಮ ಮತ ದೇಶ ರಕ್ಷಿಸುವವರಿಗೆ ಹೊರತು ಭಕ್ಷಿಸುವವರಿಗಲ್ಲ". ಮತದಾನದ ದಿನ ಸೋಮಾರಿತನ ಬಿಟ್ಟು ಪ್ರಾರಂಭದ ಸಮಯದಲ್ಲೇ "ಕ್ಯೂ" ಹಚ್ಚಿ ಮತದಾನ ಮಾಡಿ ಬಂದು ನಂತರ ನಿಮ್ಮ ದೈನಂದಿನ ಕೆಲಸಗಳನ್ನು ಮಾಡಿರಿ.

●

- ಒಳ್ಳೆಯವರೊಂದಿಗೆ ಒಳ್ಳೆಯವರಾಗಿರೋಣ.ಆದರೆ ಕೆಟ್ಟವರೊಂದಿಗೆ ಕೆಟ್ಟವರಾಗುವುದು ಬೇಡ. ಏಕೆಂದರೆ ವಜ್ರದಿಂದ ವಜ್ರವನ್ನು ಕತ್ತರಿಸಬಹುದು ಆದರೆ ಕೆಸರಿನಿಂದ ಕೆಸರನ್ನು ತೊಳೆಯಲಾಗದು.
- ನಮ್ಮ ಪ್ರಶ್ನೆಗಳು ನಮ್ಮ ಆಲೋಚನೆಯನ್ನು ಪ್ರತಿಬಿಂಬಿಸುವಾಗ, ನಮ್ಮ ಉತ್ತರಗಳು ನಮ್ಮ ಜ್ಞಾನವನ್ನು ಬಹಿರಂಗಪಡಿಸುತ್ತವೆ.
- ಯಾವುದೇ ಕೆಲಸ ಮಾಡಲು ಬೇಕಾಗಿರುವುದು ಬರೀ ಕೌಶಲ್ಯವಲ್ಲ. ಬದಲಾಗಿ ಕೆಲಸ ಮಾಡಬೇಕು ಎಂಬ ಹಂಬಲ ಮತ್ತು ಮಾಡಿಯೇ ತೀರುವ ಮನೋಬಲ.
- ಭಾರ ನಮ್ಮನ್ನು ಕುಸಿಯುವಂತೆ ಮಾಡುವುದಿಲ್ಲ. ಆದರೆ, ನಾವು ಯಾವ ರೀತಿ ಭಾರವನ್ನು ಹಿಡಿದಿದ್ದೇವೆ ಎಂಬುದು ಮುಖ್ಯವಾಗುತ್ತದೆ. ಸಮಸ್ಯೆಗಳಿಂದ ಯಾರೂ ಕುಸಿದು ಹೋಗುವುದಿಲ್ಲ. ಆದರೆ, ನಾವು ಸಮಸ್ಯೆಯನ್ನು ಹೇಗೆ ನಿಭಾಯಿಸುತ್ತೇವೆ ಎಂಬುದು ಮುಖ್ಯವಾಗುತ್ತದೆ.

# ಹಿಂದೂ ಧರ್ಮ ಜೀವನ ಕ್ರಮ



**ಡಾ॥ ಲೋಕೇಶ್**
**ಮುಖ್ಯಸ್ಥರು & ಸಂಯೋಜಕರು**
**'ಶಿಕ್ಷಣ ವಿಭಾಗ', NMKRV ಮಹಿಳಾ ಕಾಲೇಜು, ಜಯನಗರ 3ನೇ ಬ್ಲಾಕ್, ಬೆಂಗಳೂರು**



ಜಗತ್ತಿನಲ್ಲಿ ಯಾವುದಾದರೂ ಒಂದು ದೇಶವು ಪುಣ್ಯಭೂಮಿ ಎಂದು ಕರೆಯಿಸಿಕೊಳ್ಳಲು ಅರ್ಹವಾಗಿದ್ದರೆ, ಜೀವಿಗಳು ತಮ್ಮ ಬಾಳಿನ ಕೊನೆಯ ಕರ್ಮವನ್ನು ಸವೆಸಲು ಬರಬೇಕಾದ ಸ್ಥಳವೊಂದಿದ್ದರೆ, ಭಗವಂತನೆಡೆಗೆ ಸಂಚರಿಸುತ್ತಿರುವ ಪ್ರತಿಯೊಂದು ಜೀವಿಯೂ ತನ್ನ ಕೊನೆಯ ಯಾತ್ರೆಯನ್ನು ಪೂರೈಸುವುದಕ್ಕೆ ಒಂದು ಕರ್ಮಭೂಮಿಗೆ ಬರಬೇಕಾಗಿದ್ದರೆ, ಯಾವುದಾದರೂ ದೇಶದಲ್ಲಿ ಮಾನವ ಕೋಟಿಯು ಮಾಧುರ್ಯ, ಔದಾರ್ಯ, ಪಾವಿತ್ರ್ಯ, ಶಾಂತಿ ಇವುಗಳಲ್ಲಿ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಅಧ್ಯಾತ್ಮಿಕತೆ ಮತ್ತು ಅಂತರ್ಮುಖ ಜೀವನದಲ್ಲಿ ತನ್ನ ಪರಾಕಾಷ್ಠೆಯನ್ನು ಮುಟ್ಟಿದ್ದರೆ, ಅದು ಭರತಖಂಡವೇ ಆಗಿದೆ. ಇಂತಹ ಉದಾತ್ತ ಚಿಂತನೆಯನ್ನು ನಾವು ಹಿಂದೂ ಧರ್ಮದಲ್ಲಿ ಮಾತ್ರ ನೋಡಲು ಸಾಧ್ಯವಾಗುತ್ತದೆ. ಹಾಗಾದರೆ 'ಹಿಂದೂ ಧರ್ಮ' ಎಂದರೇನು ಎಂಬ ಸಹಜ ಕುತೂಹಲ ಎಲ್ಲರಿಗೂ ಮೂಡುತ್ತದೆ. 'ಹಿಂದೂಧರ್ಮ' ಎಂಬುದು 'ಹಿಂದೂ' ಮತ್ತು 'ಧರ್ಮ' ಎಂಬ ಎರಡು ಪದಗಳಿಂದ ಉಂಟಾಗಿದೆ. 'ಹಿಂದೂ' ಎಂಬುದು

ಮೂಲತಃ ಭಾರತೀಯ ಪದವಲ್ಲ. ಸಿಂಧೂ ನದಿಯ ಆಚೆಗಿನ ಭೂಮಿ ಹಾಗೂ ಜನರನ್ನು ಸಂಬೋಧಿಸಲು ಗ್ರೀಕರು ತದನಂತರ ಪರ್ಷಿಯನ್ನರು ಉಪಯೋಗಿಸಿದ ಪದವಾಗಿದೆ. ಸಿಂಧುವಿನ ಅಪಭ್ರಂಶವೇ 'ಹಿಂದೂ' ಆಗಿದೆ. 5000 ವರ್ಷಗಳ ಇತಿಹಾಸವುಳ್ಳ ಜಗತ್ತಿನ ಅತ್ಯಂತ ಪುರಾತನ ನಾಗರೀಕತೆಯ ತೊಟ್ಟಿಲು ಸಿಂಧೂ ನದಿ ಆಗಿದೆ. ಧರ್ಮ ಎಂಬುದನ್ನು ಆಂಗ್ಲಭಾಷೆಯ 'ರಿಲಿಜಿಯನ್' ಪದಕ್ಕೆ ಸಮಾನಾರ್ಥಕವಾಗಿ ಬಳಸುವುದು ಸಾಮಾನ್ಯವಾಗಿದೆ. ಭಾರತೀಯ ಚಿಂತನೆಯಲ್ಲಿ ಧರ್ಮ ಎಂಬುದು ಯಾವುದು ಸರಿ ಅಥವಾ ತಪ್ಪು ಎಂಬುದರ ಬಗ್ಗೆ ತಿಳುವಳಿಕೆ ನೀಡುವಂತದ್ದು. ಧರ್ಮ ಎಂಬುದು ಸತ್ಯ, ಸಾಕ್ಷಾತ್ಕಾರದ ಪ್ರತಿಬಿಂಬವೇ ಆಗಿದೆ. ಈ ದೃಷ್ಟಿಕೋನದಲ್ಲಿ 'ಹಿಂದೂ ಧರ್ಮ' ಸನಾತನ ಧರ್ಮವಾಗಿದೆ. ಸನಾತನ ಕಾಲದಿಂದಲೂ ವಿಶ್ವಕ್ಕೆ ಬೆಳಕು ನೀಡಿ ಮನುಕುಲದ ಉದ್ಧಾರಕ್ಕೆ ಕಾರಣಕರ್ತವಾದ ಧರ್ಮವೊಂದಿದ್ದರೆ ಅದು 'ಹಿಂದೂ ಧರ್ಮ' ಮಾತ್ರ! ಇದನ್ನು 'ಹಿಂದೂಯಿಸಂ' ಎಂತಲೂ ಸಹ ಕರೆಯುತ್ತಾರೆ. ಭಾರತೀಯರ ಉತ್ಕೃಷ್ಟ ವಿಚಾರಧಾರೆಗಳಿಗೆ ಅಡಿಪಾಯವೇ ಹಿಂದೂಧರ್ಮ. ಜಗತ್ತಿನ ಇತರೇ ಧರ್ಮಗಳಾದ ಕ್ರೈಸ್ತ, ಇಸ್ಲಾಂ, ಬೌದ್ಧ ಮತ್ತು ಜೈನ ಧರ್ಮಗಳಿಗೆ ಅವರದೇ ಆದ ಧರ್ಮ ಸಂಸ್ಥಾಪಕರಿದ್ದಾರೆ. ಆದರೆ ಹಿಂದೂಧರ್ಮಕ್ಕೆ ನಿರ್ದಿಷ್ಟ ಸಂಸ್ಥಾಪಕರಿಲ್ಲ. ಇದು ಕಾಲವೆಂಬ ಗರ್ಭದಲ್ಲಿ ಉದಯಿಸಿದ ವಿಚಾರಧಾರೆಗಳ ಸಂಗಮವಾಗಿದೆ. ಜಗತ್ತಿನ ಇತರೆ ಧರ್ಮಗಳಂತೆ ಏಕದೇವತಾ ಆರಾಧನೆಯ ಬದಲು ಹಿಂದೂ ಧರ್ಮದಲ್ಲಿ ಬಹುದೇವತಾ ಆರಾಧನೆ ಇದೆ. ಆದರೆ ಎಲ್ಲಿಯೂ ಸಂಘರ್ಷವಿಲ್ಲ, ಬದಲಿಗೆ ಸಾಮರಸ್ಯವಿದೆ, ಇದೇ ಹಿಂದೂ ಧರ್ಮದ ಆಸ್ಮಿತೆಯಾಗಿದೆ.

'ಹಿಂದೂ ಧರ್ಮವೆಂದರೆ 'ವೈವಿಧ್ಯತೆಯಲ್ಲಿ ಏಕತೆ' ಅಲ್ಲ, ಬದಲಿಗೆ 'ಏಕತೆಯಲ್ಲಿ ವೈವಿಧ್ಯತೆ' ಆಗಿದೆ. 'ದೇವನೊಬ್ಬ ನಾಮ ಹಲವು' ಎಂಬ ಪರಿಭಾವನೆಯನ್ನು ಹಿಂದೂಧರ್ಮದಲ್ಲಿ ಮಾತ್ರ ಕಾಣಲು ಸಾಧ್ಯವಾಗಿದೆ. ಧಾರ್ಮಿಕ ತತ್ವ ಸಿದ್ಧಾಂತಗಳಾದ ಅದ್ವೈತ, ದ್ವೈತ, ವಿಶಿಷ್ಟಾದ್ವೈತ ಮತ್ತು ಶಕ್ತಿ ವಿಶಿಷ್ಟಾದ್ವೈತಗಳ ಉಗಮಕ್ಕೆ ಕಾರಣವಾದ ಪುಣ್ಯಭೂಮಿ ಭಾರತ. ವಿಭಿನ್ನ ಉಪಾಸನ ಮಾರ್ಗಗಳನ್ನು ನೀಡಿದ್ದರು, ಇಲ್ಲಿ ಭೇದವಿಲ್ಲ. ವಿಚಾರ ತತ್ವ ಸಿದ್ದಾಂತಗಳು ಭಿನ್ನವಾಗಿದ್ದರೂ, ಸಂಘರ್ಷಕ್ಕೆ ದಾರಿ ಮಾಡಿಕೊಟ್ಟಿಲ್ಲ. ಇದೇ ಸನಾತನ ಹಿಂದೂ ಧರ್ಮದ ಆಸ್ಮಿತೆಯಾಗಿದೆ. ಜೀವನ ಕ್ರಮ ಎಲ್ಲಾ ರೀತಿಯ ಸಂಕುಚಿತ ಜಾತಿ, ವರ್ಗ ಮತ್ತು ಪಂಥಗಳ ಸೀಮೋಲ್ಲಂಘನೆ ಮಾಡಿರುವುದರಿಂದ ಇದು ಶಾಶ್ವತ ಮೌಲ್ಯಯುತ ಜೀವನಕ್ರಮವೆನಿಸಿದೆ.

ಹಿಂದೂ ಧರ್ಮದಲ್ಲಿರುವ ವಿಭಿನ್ನ ಪಂಗಡಗಳು ಹಿಂಸೆಯಿಂದ ಮುಕ್ತವಾಗಿವೆ. ಶಾಂತಿ, ಪರಸ್ಪರ ಸಹಬಾಳ್ವೆ ಮತ್ತು ಸಹಿಷ್ಣತೆಯಿಂದ ಉತ್ಕೃಷ್ಟ ಜೀವನ ಕ್ರಮ ಎನಿಸಿದೆ. ಹಿಂದೂ ಧರ್ಮದಲ್ಲಿನ ವ್ಯಕ್ತಿಗಳು ವಿಭಿನ್ನ ಉಪಾಸನ ಅನುಸರಿಸಿದರೂ ಎಲ್ಲ ಧರ್ಮಗಳನ್ನು ಗೌರವಿಸುತ್ತಾರೆ. ನಮ್ಮ ಧರ್ಮದಂತೆ ಇತರೆ ಧರ್ಮಗಳು ಸಹ ಶ್ರೇಷ್ಠತೆ ಹೊಂದಿವೆ ಎಂಬುದನ್ನು ಸ್ವೀಕರಿಸುತ್ತಾರೆ. ಆದ ಕಾರಣ ಹಿಂದೂ ಧರ್ಮ ಯಾವುದೇ ಇತರೇ ಧರ್ಮದ ಮೇಲೆ ಯುದ್ಧ ಸಾರಿ ಸಾರ್ವಭೌಮತ್ವ ಪಡೆದಿದೆ ಎಂಬುದು ಇತಿಹಾಸದಲ್ಲಿ ದಾಖಲಾಗಿಲ್ಲ. ಧರ್ಮದ ಹೆಸರಲ್ಲಿ 'ರಕ್ತಪಾತ' ನಡೆಸಿಲ್ಲ. ಹಿಂದೂಧರ್ಮ ಎಂತಹ ವಿಷಮ ಪರಿಸ್ಥಿತಿಯಲ್ಲೂ ಬಲವಂತದ ಮತಾಂತರವನ್ನು ಸ್ವೀಕರಿಸಿಲ್ಲ ಬದಲಿಗೆ ಅದನ್ನು ವಿರೋಧಿಸಿದೆ. ಧರ್ಮದ ಹೆಸರಲ್ಲಿ ವ್ಯಕ್ತಿ, ದೇಶ, ಸಂಸ್ಕೃತಿಯ ವಿಭಜನೆಯನ್ನು ಪುರಸ್ಕರಿಸಿಲ್ಲ ಇದೇ ಹಿಂದೂ ಧರ್ಮದ ಉತ್ಕೃಷ್ಟ ಜೀವನಕ್ರಮ.

ಹಿಂದೂ ಧರ್ಮ ಒಂದು ಮಹೋನ್ನತ ಮಾನವ ಧರ್ಮ.

ಪುಟ 13 ಕ್ಕೆ ➤

# ಅಕ್ಷಯ ತೃತೀಯಾ



**ನಮ್ಮ ಭಾರತೀಯ ಪರಂಪರೆಯಲ್ಲಿ ಅನೇಕ ಹಬ್ಬ ಹರಿದಿನಗಳನ್ನು ನಾವು ಆಚರಿಸುತ್ತಾ ಬಂದಿದ್ದೇವೆ. ಈ ಹಬ್ಬ ಹರಿದಿನಗಳ ಆಚರಣೆಯ ಮುಖ್ಯ ಉದ್ದೇಶವೇನೆಂದರೆ ಮಾನವನ ಅಂತರ್ಯದ ಕತ್ತಲು ದೂರವಾಗಿ ಸುಜ್ಞಾನದ ಕಡೆಗೆ ಜೀವನ ಮುನ್ನಡೆಯಬೇಕು, ತನ್ಮೂಲಕ ಆಧ್ಯಾತ್ಮಿಕ ಸಾಧನೆಗೆ ಈ ಹಬ್ಬದ ಆಚರಣೆ ಭದ್ರ ಬುನಾದಿಯಾಗಬೇಕು ಎಂಬ ಉನ್ನತ ಚಿಂತನೆ ಇದರ ಹಿಂದೆ ಅಡಗಿದೆ. ಈ ಹಿನ್ನೆಲೆಯಲ್ಲಿ ಅಕ್ಷಯ ತೃತೀಯಾ ಹಬ್ಬದ ಮಹತ್ತ್ವವನ್ನು ಅರಿಯುವ ಪ್ರಯತ್ನ ಮಾಡೋಣ.**

**ವಿದ್ವಾನ್ ನಾರಾಯಣ ಭಟ್ಟ**
ಮುಖ್ಯ ಶಿಕ್ಷಕರು
ಸರ್ಕಾರಿ ಪ್ರೌಢಶಾಲೆ, ಆನೇಕಲ್



## ಹಿನ್ನೆಲೆ

ಪ್ರತಿವರ್ಷವೂ ವೈಶಾಖ ಮಾಸದ ಶುಕ್ಲ ಪಕ್ಷದ ತೃತೀಯಾ ದಿನದಂದು ಅಕ್ಷಯ ತೃತೀಯಾ ಎಂಬ ಹಬ್ಬವನ್ನು ಆಚರಿಸಲಾಗುವುದು. 'ಕ್ಷಯ' ಎಂದರೆ 'ನಾಶ' ಎಂದರ್ಥ. 'ಅಕ್ಷಯ' ಎಂದರೆ ನಾಶವಿಲ್ಲದ್ದು, ಶಾಶ್ವತವಾದುದು. ಇದು ಅತ್ಯಂತ ಪುಣ್ಯತಮವಾದ ದಿನ. ಈ ದಿನದಂದು ಅಕ್ಷರಾಭ್ಯಾಸ, ನೂತನ ಗೃಹಪ್ರವೇಶ ಮುಂತಾದ ಶುಭ ಕಾರ್ಯಗಳನ್ನು ಕೈಗೊಳ್ಳುತ್ತಾರೆ. ಈ ದಿನದಂದು ಆಚರಿಸಿದ ಎಲ್ಲಾ ಸತ್ಕಾರ್ಯಗಳು ಅಕ್ಷಯವಾಗುತ್ತವೆ.

## ಈ ದಿನದ ಮಹತ್ತ್ವ

ಪುರಾಣೇತಿಹಾಸಗಳಲ್ಲಿ ಈ ದಿನದ ಮಹತ್ತ್ವವನ್ನು ಉಲ್ಲೇಖಿಸಲಾಗಿದೆ.

- ಮಹಾಭಾರತದಲ್ಲಿ, ದ್ಯೂತದಲ್ಲಿ ಸೋತ ಪಾಂಡವರು ಮೊದಲೇ ವಚನ ನೀಡಿದಂತೆ ವನವಾಸಕ್ಕೆ ತೆರಳಿದರು. ಆ ಸಂದರ್ಭದಲ್ಲಿ ಅನೇಕ ರಾಜ–ಮಹಾರಾಜರು, ಸಾಧು ಸಂತರು ಪಾಂಡವರ ದರ್ಶನಕ್ಕಾಗಿ ಅವರ ವಾಸಸ್ಥಳಕ್ಕೆ ಬರುತ್ತಿದ್ದರು. ಅವರ ಆತಿಥ್ಯಕ್ಕೆ ಏನೂ ಇಲ್ಲದ ಆ ಸಂಕಷ್ಟ ಪರಿಸ್ಥಿತಿಯಲ್ಲಿ ಸೂರ್ಯದೇವನು ದ್ರೌಪದಿಗೆ ಅಕ್ಷಯಪಾತ್ರೆಯನ್ನು ನೀಡಿದ ದಿನವೇ ಈ ಶುಭದಿನ.
- ಸಮಾಜ–ಸುಧಾರಕರಾದ ಹನ್ನೆರಡನೆಯ ಶತಮಾನದ ಪೂಜ್ಯ ಶ್ರೀ ಜಗಜ್ಯೋತಿ ಬಸವೇಶ್ವರರ ಜನ್ಮದಿನ ಈ ಶುಭದಿನ.
- ಭಗವಾನ್ ವಿಷ್ಣುವಿನ ಅವತಾರವಾದ, ಅತ್ಯಂತ ಪರಾಕ್ರಮಿಯಾದ ಶ್ರೀ ಪರಶುರಾಮರ ಜನ್ಮದಿನ ಈ ಶುಭದಿನ.
- ಆತ್ಮೀಯ ಗೆಳೆತನಕ್ಕೆ ಆದರ್ಶವಾದ ಕೃಷ್ಣ ಸುದಾಮರ ಕಥೆ ಅತ್ಯಂತ ಪ್ರಸಿದ್ಧವಾದುದು. ಕಡು ಬಡತನದಿಂದ ಬೇಸತ್ತ ಸುದಾಮನು ಸಖನಾದ ಶ್ರೀಕೃಷ್ಣನ ಬಳಿಗೆ ಬಂದಾಗ, ಸ್ನೇಹಿತನ ಭಕ್ತಿಗೆ ಮೆಚ್ಚಿದ ಶ್ರೀಕೃಷ್ಣನು ಸಕಲ ಧನ–ಕನಕಾದಿಗಳನ್ನು ದಯಪಾಲಿಸಿದ ದಿನ ಈ ಶುಭದಿನ.
- ಪವಿತ್ರ ಗಂಗಾಮಾತೆಯು ಭಗೀರಥಮುನಿಯ ತಪೋಬಲದಿಂದ ಧರೆಗಿಳಿದ ದಿನ ಈ ಶುಭದಿನ.
- ಭಿಕ್ಷೆ ಬೇಡಲು ಬಂದ ವಟುವಿಗೆ ವೃದ್ಧಮಾತೆಯು, ಮನೆಯಲ್ಲಿ ಏನೂ ಇಲ್ಲದಿರುವಾಗ ನೆಲ್ಲಿಕಾಯಿಯನ್ನೇ ಭಕ್ತಿಯಿಂದ ಪೂಜ್ಯ ಶ್ರೀ ಶಂಕರಾಚಾರ್ಯರಿಗೆ ನೀಡುತ್ತಾಳೆ. ಆ ಕಡುಬಡತನವನ್ನು ಅರಿತ ಪರಮದಾರ್ಶನಿಕರಾದ ಪೂಜ್ಯ ಶ್ರೀ ಶಂಕರಾಚಾರ್ಯರು ಕನಕಧಾರಾ ಸ್ತೋತ್ರವನ್ನು ಪಠಿಸಿದ ದಿನವೇ ಈ ಶುಭದಿನ.
- ಭಗವಾನ್ ವೇದವ್ಯಾಸರು ಗಣೇಶನ ಮೂಲಕ ಶ್ರೇಷ್ಠ ಗ್ರಂಥವಾದ ಮಹಾಭಾರತವನ್ನು ರಚಿಸಿದ ದಿನ ಈ ಶುಭದಿನ.

ಹೀಗೆ ಅಕ್ಷಯ ತೃತೀಯಾ ಹಬ್ಬವು ಅಗಾಧವಾದ ಮಹಿಮೆಯನ್ನು ಹೊಂದಿದೆ. ಹಬ್ಬದ ಆಚರಣೆಯು ಸಮಾಜದಲ್ಲಿ ಪರಸ್ಪರ ಬಾಂಧವ್ಯದ ಬೆಸುಗೆಗೆ ಕಾರಣವಾಗುತ್ತದೆ. ಒಬ್ಬರಿಗೊಬ್ಬರು 'ಶುಭ' ಹಾರೈಸುವುದರೊಂದಿಗೆ ಪ್ರೀತಿ–ವಿಶ್ವಾಸಗಳು ಸ್ಥಿರವಾಗುತ್ತವೆ. ನಿತ್ಯ ಜೀವನದಲ್ಲಿ ಹರ್ಷೋಲ್ಲಾಸ, ಸ್ಫೂರ್ತಿ, ಸತ್ಕಾರ್ಯವನ್ನು ಮಾಡಲು ಪ್ರೇರಣೆ, ಸಮಾಜ ಸೇವೆ, ಸತ್ಸಂಗ, ಈ ಮುಂತಾದ ಜೀವನಾದರ್ಶಗಳಿಗೆ ಈ ಹಬ್ಬವು ನಾಂದಿಯಾಗಲಿ ಹಾಗೂ ಭಗವಂತನ ಕೃಪೆ ಸದಾ ಎಲ್ಲರ ಮೇಲಿರಲಿ.

॥ ಸರ್ವೇ ಜನಾಃ ಸುಖಿನೋ ಭವಂತು ॥

# ಯುಗಾದಿ ಹೇಗೆ? ಯಾರಿಗೆ?





**ವಿದ್ವಾನ್ ಡಾ॥ ವೆಂಕಟರಮಣ ದೇವರು ಭಟ್ಟ**
**ಕಾರ್ಯದರ್ಶಿಗಳು, ಕ.ರಾ.ಮಾ.ಶಿ.ಸಂಘ**
**ಬೆಂಗಳೂರು ದಕ್ಷಿಣ ಜಿಲ್ಲೆ**

**ಯುಗ ಯುಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ**
**ಹೊಸ ವರುಷಕೆ ಹೊಸ ಹರುಷವ ಹೊಸತು ಹೊಸತು ತರುತಿದೆ ॥**

ರಾಷ್ಟ್ರಕವಿ ಕುವೆಂಪುರವರ ಯುಗಾದಿಯ ಸೊಬಗನ್ನು ಸೊಗಡನ್ನು ವರ್ಣಿಸುವ ಈ ಕವಿವಾಣಿಯನ್ನು ಎಷ್ಟು ವರ್ಷದಿಂದ ಆಲಿಸುತ್ತಿದ್ದರೂ ಮನಸ್ಸಿಗೆ ಮುದವನ್ನು ನೀಡುತ್ತದೆ. ಯುಗಾದಿಯ ಮಹಿಮೆಯೇ ಹಾಗೆ, ಚೈತ್ರಮಾಸದಿಂದ ವಸಂತ ಋತು ಪ್ರಾರಂಭವಾಗುತ್ತದೆ. ಪ್ರಕೃತಿ ಜೀವಜಂತುಗಳಲ್ಲಿ ಹೊಸ ಚೈತನ್ಯವನ್ನು ತುಂಬುತ್ತದೆ. ಗಿಡಮರಬಳ್ಳಿಗಳಲ್ಲಿ ಎಲೆಗಳೆಲ್ಲ ಉದುರಿ ಹೊಸ ಚಿಗುರಿನಿಂದ ಹಸಿರಿನಿಂದ, ಹೂಗಳಿಂದ ನಳನಳಿಸುತ್ತವೆ, ಮಾವಿನ ಮರಗಳಲ್ಲಿ ಬಾಯಲ್ಲಿ ನೀರೂರಿಸುವ ಮಾವಿನ ಮಿಡಿಗಳು, ಪಕ್ಷಿಗಳ ಕಲರವ. ಕೋಗಿಲೆಯ ಇಂಪಾದ ಮೃದುಮಧುರ ಧ್ವನಿ, ಹಲಸಿನ ಮರಗಳಲ್ಲಿ ಹಲಸಿನ ಕಾಯಿಗಳು ಹೀಗೆ ಬಗೆ ಬಗೆಯ ವೈವಿಧ್ಯತೆಯಿಂದ ಪ್ರಕೃತಿಮಾತೆ ಕಂಗೊಳಿಸುತ್ತಾಳೆ. ಪ್ರಕೃತಿಯೇ ಹೊಸತನದ ಆಗಮನವನ್ನು ಸ್ವಾಗತಿಸಲು ಸಜ್ಜಾದಂತೆ ಭಾಸ. ಪ್ರಕೃತಿಯಲ್ಲಿ ಸಹಜವಾಗಿ ಉಂಟಾಗುವ ಈ ಬದಲಾವಣೆಯ ಪರ್ವಕಾಲವೇ ಭಾರತೀಯರಿಗೆ ವರ್ಷದ ಆರಂಭ, ಅದೇ ಹೊಸ ವರ್ಷ, ಇದೇ ಯುಗಾದಿ. ಹೊಸ ವರ್ಷದ ಪ್ರಾರಂಭದ ಸಂಕೇತವಾದ ಯುಗಾದಿಯನ್ನು ಬಡವ ಬಲ್ಲಿದರೆಂಬ ತಾರತಮ್ಯವಿಲ್ಲದೇ ಎಲ್ಲ ಹಿಂದೂಗಳೂ ದೇಶದಾದ್ಯಂತ ಸಂಭ್ರಮದಿಂದ ಆಚರಿಸುತ್ತಾರೆ.

ಈ ಪವಿತ್ರ ಹಬ್ಬಕ್ಕಿದೆ ಪೌರಾಣಿಕ, ಐತಿಹಾಸಿಕ ಮತ್ತು ವೈಜ್ಞಾನಿಕ ಹಿನ್ನೆಲೆ. ಯುಗಸ್ಯ ಆದಿ: ಯುಗಾದಿ: ಇದು ಸಂಸ್ಕೃತ ಪದ, ಯುಗ ಮತ್ತು ಆದಿ ಎರಡು ಶಬ್ದಗಳಿಂದ ಕೂಡಿದೆ. ಯುಗವೆಂದರೆ ಸೃಷ್ಟಿಯ ಕಾಲಮಾನ, ಆದಿ ಎಂದರೆ ಆರಂಭ. ಬ್ರಹ್ಮಪುರಾಣದಲ್ಲಿ ಯುಗದ ಆದಿಯನ್ನು ಹೀಗೆ ತಿಳಿಸಿದ್ದಾರೆ.

**ಚೈತ್ರೇ ಮಾಸೇ ಜಗದ್ ಬ್ರಹ್ಮಾ ಸಸರ್ಜ ಪ್ರಥಮೇಹನಿ ।**
**ಶುಕ್ಲಪಕ್ಷೇ ಸಮಗ್ರಂ ತು ತಥಾ ಸೂರ್ಯೋದಯೇ ಸತಿ ॥**
**ಪ್ರವರ್ತಯಾಮಾಸ ತಥಾ ಕಾಲಸ್ಯ ಗಣನಾಮಪಿ।**

ಪ್ರಜಾಪತಿಯು ಚೈತ್ರಮಾಸದ ಶುಕ್ಲಪಕ್ಷದ ಮೊದಲನೆಯ ದಿನದಂದು ಸೂರ್ಯೋದಯದ ಸಮಯದಲ್ಲಿ ಜಗತ್ತನ್ನು ಸೃಷ್ಟಿಮಾಡಿ ಕಾಲಗಣನೆಯನ್ನು ಪ್ರರಂಭಮಾಡಿದನು. ಕಾಲದ ಅವಯವಗಳನ್ನು ದೇವತೆಗಳಿಗೆ ಕೊಟ್ಟು ಜಗತ್ತಿನ ಸೃಷ್ಟಿಯನ್ನು ಮುಂದುವರೆಸಿರಿ ಎಂದು ಅಪ್ಪಣೆ ನೀಡಿದನು.

ಭಗವಂತನು ಮತ್ಸ್ಯಾವತಾರವನ್ನು ತಾಳಿದ್ದು ಈ ದಿನದಂದೇ. ರಾವಣನನ್ನು ಸಂಹರಿಸಿ ಅಯೋಧ್ಯೆಗೆ ಬಂದ ಶ್ರೀರಾಮಚಂದ್ರನಿಗೆ ಪಟ್ಟಾಭಿಷೇಕವಾದದ್ದು ಈ ಪವಿತ್ರ ದಿನದಂದು. ಉತ್ತರ ಭಾರತದಲ್ಲಿ ವಿಕ್ರಮಾದಿತ್ಯನು ಪ್ರಾರಂಭಿಸಿದನೆಂದು ಹೇಳುವ ಶಕೆ ಮತ್ತು ದಕ್ಷಿಣ ಭಾರತವನ್ನಾಳಿದ ಶಾಲಿವಾಹನ ರಾಜನು ಸಿಂಹಾಸನಾರೂಢನಾಗಿ ಆರಂಭಿಸಿದ ಶಕೆ ಚೈತ್ರಮಾಸದ ಪಾಡ್ಯದಂದು ಎಂದು ಹೇಳಲಾಗುತ್ತದೆ. ಹಿಂದುಗಳು ಶಾಲಿವಾಹನ ಶಕೆಯ ಸಂವತ್ಸರಗಳನ್ನಾಧರಿಸಿ, ಚೈತ್ರಮಾಸದ ಪ್ರತಿಪದೆಯಿಂದ ಯುಗಾದಿಯನ್ನು ಆಚರಿಸುವರು. ರಾಮಪೂಜೆ ಅಥವಾ ದುರ್ಗಾಪೂಜೆಯನ್ನು ಪ್ರಾರಂಭಿಸುವ ವಸಂತನವರಾತ್ರವು ಇಂದಿನಿಂದ ಪ್ರಾರಂಭವಾಗುತ್ತದೆ.

ಯುಗಾದಿಯನ್ನು ಚಾಂದ್ರಮಾನ ಮತ್ತು ಸೌರಮಾನ ಹೀಗೆ ಎರಡು ಬಗೆಯಲ್ಲಿ ಆಚರಿಸುವ ಪದ್ಧತಿ ಇದೆ. ಚಂದ್ರನ ಚಲನೆಯನ್ನು ಗುರುತಿಸಿ ಮಾಡುವ ಪದ್ಧತಿ ಚೈತ್ರ ಶುಕ್ಲ ಪ್ರತಿಪತ್(ಪಾಡ್ಯ) ಚಾಂದ್ರಮಾನ ಯುಗಾದಿ. ಸೂರ್ಯ ಮೇಷರಾಶಿಗೆ ಬಂದಾಗ ಸೌರಮಾನ ಯುಗಾದಿ. ಇದು ವಿಷು ಎಂತಲೂ ಪ್ರಸಿದ್ಧ. ಕರ್ನಾಟಕ, ಆಂಧ್ರಪ್ರದೇಶ, ಮಹಾರಾಷ್ಟ್ರ, ಗುಜರಾತ್‌ಗಳಲ್ಲಿ ಚಾಂದ್ರಮಾನ ಯುಗಾದಿ ಆಚರಿಸಿದರೆ, ತಮಿಳುನಾಡು, ಕೇರಳ ಮತ್ತು ಉತ್ತರ ಬಾರತದ ಕೆಲವು ಸ್ಥಳಗಳಲ್ಲಿ ಸೌರಮಾನ ಯುಗಾದಿ ಆಚರಿಸುವರು. ಈ ಹಬ್ಬವನ್ನು ಭಾರತದಲ್ಲಿ ಬೇರೆ ಬೇರೆ ಹೆಸರಿನಿಂದ ಆಚರಿಸುವರು. ಕರ್ನಾಟಕದಲ್ಲಿ ಯುಗಾದಿ (ಉಗಾದಿ), ಮಹಾರಾಷ್ಟ್ರದಲ್ಲಿ 'ಗುಡಿಪಾಡವಾ', ಆಂಧ್ರಪ್ರದೇಶ ಮತ್ತು ತಮಿಳುನಾಡಿನಲ್ಲಿ 'ಹೊಸವರ್ಷ', ಉತ್ತರ ಭಾರತದಲ್ಲಿ 'ಬೈಸಾಖಿ' ಎಂದು ಆಚರಿಸುತ್ತಾರೆ.

ಯುಗಾದಿ ಹಬ್ಬದ ದಿನದಂದು ಮನೆಮನೆಗಳಲ್ಲಿ ಮಾವಿನ ತಳಿರುತೋರಣ, ರಂಗೋಲಿ ಮುಂತಾದವುಗಳಿಂದ ಗೃಹಾಲಂಕಾರ ಮಾಡುತ್ತಾರೆ. ಅಭ್ಯಂಗಸ್ನಾನ, ಇಷ್ಟ ದೇವತೆಯ ಪೂಜೆ, ವಿಶೇಷ ನೈವೇದ್ಯ, ದಾನ ಮುಂತಾದವುಗಳನ್ನು ಮಾಡುವರು. ರೈತರು ಎತ್ತುಗಳನ್ನು ಶೃಂಗರಿಸಿ ಸಂಭ್ರಮಿಸುತ್ತಾರೆ. ದೇವಾಲಯಗಳಲ್ಲಿ ವಿಶೇಷ ಅಲಂಕಾರ ವಿಶೇಷಪೂಜೆ ನಡೆಯುತ್ತದೆ. ಪಂಚಾಂಗ ಶ್ರವಣ ಏರ್ಪಡಿಸುವರು. ಪ್ರತಿವರ್ಷದಲ್ಲೂ ಬರುವ ಕಷ್ಟ–ನಷ್ಟ, ಮಳೆ–ಬೆಳೆ ವಿಚಾರವನ್ನು ಜನರು

ಪುಟ 14 ಕ್ಕೆ ➤

# ಮಕ್ಕಳ ಬೇಸಿಗೆ ರಜೆಯ ಕಲಿಕೆಗಳು



**ಲಕ್ಷ್ಮೀಸಿಂಗ್ ಬಿ.**
**ಶೈಕ್ಷಣಿಕ ಸಮಾಲೋಚಕರು, ಲೈಫ್‌ಕೋಚ್**
**ಸಂಪನ್ಮೂಲ ವ್ಯಕ್ತಿ (ಗಣಿತ), ಗಂಗಾನಗರ,**
**ಬೆಂಗಳೂರು –560 032**
**ದೂರವಾಣಿ ಸಂಖ್ಯೆ: 9980033636**



ಬೇಸಿಗೆಯ ಸಮಯವು ವಿದ್ಯಾರ್ಥಿಗಳಿಗೆ ತಮ್ಮ ಶಾಲಾ ಜವಾಬ್ದಾರಿಗಳಿಂದ ವಿರಾಮವನ್ನು ತೆಗೆದುಕೊಳ್ಳಲು ಅವಕಾಶಕೊಡುತ್ತದೆ. ಬೇಸಿಗೆ ರಜೆ ಎಂದರೆ ಎರಡು ತಿಂಗಳು ಮಜಾ ಮಾಡಬಹುದು ಎಂಬುದು ಮಕ್ಕಳ ಮನಸ್ಸಿನಲ್ಲಿರುತ್ತದೆ.

ರಜೆಯ ಮಜವನ್ನು ಅನುಭವಿಸುವ ಜೊತೆಗೆ ರಜೆಯನ್ನು ಅರ್ಥಪೂರ್ಣವಾಗಿ ಕಳೆಯುವುದು ಬಹಳ ಮುಖ್ಯವಾಗಿರುತ್ತದೆ. ಕೆಲವು ಒಳ್ಳೆಯ ಹವ್ಯಾಸಗಳನ್ನು ಮಕ್ಕಳಲ್ಲಿ ರೂಢಿಸುವುದರಿಂದ ಮುಂದೆ ಆ ಹವ್ಯಾಸಗಳೇ ಅಭ್ಯಾಸಗಳಾಗಿ ಮಕ್ಕಳ ಭವಿಷ್ಯಕ್ಕೆ ಸಹಾಯವಾಗುತ್ತದೆ.

ಎರಡು ತಿಂಗಳ ಬೇಸಿಗೆ ರಜೆಯಲ್ಲಿ ಮಕ್ಕಳ ಕೆಲವು ದುರಭ್ಯಾಸಗಳನ್ನು ಬಿಡಿಸಬಹುದು ಮತ್ತು ಕೆಲವೊಂದು ಒಳ್ಳೆಯ ಅಭ್ಯಾಸಗಳನ್ನು ಕಲಿಸಬಹುದು. ಆದರೆ ಇಲ್ಲಿ ತಂದೆ ತಾಯಿಯರ ಜಾಣ್ಮೆ ಮುಖ್ಯವಾಗುತ್ತದೆ. ಮೊದಲಿಗೆ ಮಕ್ಕಳ ಕೆಲವು ದುರಭ್ಯಾಸಗಳ ಬಗ್ಗೆ ತಿಳಿದು ಅದನ್ನು ಹೇಗೆ ನಿವಾರಿಸಬಹುದು ಎಂಬುದರ ಬಗ್ಗೆ ಅರಿಯೋಣ.

ಮೊಟ್ಟ ಮೊದಲು ಇಂದಿನ ದಿನಮಾನಗಳ ದುರಭ್ಯಾಸ ಎಂದರೆ ಮೊಬೈಲ್ ಗೀಳು. ಮೊಬೈಲ್ ಎನ್ನುವ ಮಾಯೆ ಪ್ರಪಂಚವನ್ನೇ ಆಳುತ್ತಿದೆ. ಹುಟ್ಟಿದ ಮಗುವಿನಿಂದ ಹಿಡಿದು ಸಾವಿನಂಚಿನಲ್ಲಿರುವ ಮುದುಕರವರೆಗೂ ಮೊಬೈಲ್ ಮಾಯಾಜಾಲವನ್ನು ಬೀಸಿದೆ. ಮಕ್ಕಳನ್ನು ನಿಯಂತ್ರಿಸಲು, ಅಂದರೆ ಊಟ ಮಾಡಲು, ಮಲಗಲು ಮತ್ತು ಹೊರಗಡೆ ಸುತ್ತಾಡದಂತೆ ತಡೆಯಲು ಹೆತ್ತವರು ಮೊಬೈಲ್‌ಅನ್ನು ಮಕ್ಕಳ ಕೈಗೆ ಮುಂದಿನ ಅಪಾಯದ ಅರಿವಿಲ್ಲದೆ ಕೊಡುತ್ತಿದ್ದಾರೆ. ಅವರ ಈ ತಂತ್ರವೇ ಮುಂದೆ ಮಕ್ಕಳ ಭವಿಷ್ಯವನ್ನು ಅತಂತ್ರವಾಗಿಸುತ್ತದೆ ಎಂದರೆ ತಪ್ಪೇನಿಲ್ಲ. ತದನಂತರ ಮೊಬೈಲ್ ಚಟವನ್ನು ಬಿಡಿಸುವುದಕ್ಕೆ ಹರಸಾಹಸಪಡುವುದು, ಆದ್ದರಿಂದ ಮಕ್ಕಳ ಕೈಗೆ ಮೊಬೈಲ್ ಕೊಡುವ ಮುನ್ನ ಸಾವಿರ ಸರಿ ಯೋಚಿಸಿ. ಈಗಾಗಲೇ ಮೊಬೈಲ್ ಗೀಳಿನಿಂದ ಯಾತನೆ ಪಡುತ್ತಿರುವ ಮಕ್ಕಳಿಗೆ ಈ ಬೇಸಿಗೆ ರಜೆಯಲ್ಲಿ ಅದರ ಗೀಳಿನಿಂದ ಸಂಪೂರ್ಣ ಹೊರ ತರುವುದು ಕಷ್ಟವಾದರೂ ಬಹಳ ಮಟ್ಟಿಗೆ ಸಾಧ್ಯವಾಗುತ್ತದೆ ಎಂಬುದು ನನ್ನ ಅಭಿಮತ.

ಮತ್ತೊಂದು ದುರಭ್ಯಾಸವೆಂದರೆ ಫ್ರೆಂಡ್ಸ್. ಗೆಳೆತನ ದುರಭ್ಯಾಸವಲ್ಲ, ಆದರೆ ಮಕ್ಕಳು ಕೆಟ್ಟ ಚಟಗಳಿರುವ ಗೆಳೆಯರೊಂದಿಗೆ ಬಹಳ ಬೇಗ ಆಕರ್ಷಿತರಾಗುತ್ತಾರೆ. ಕೆಟ್ಟ ಗೆಳೆತನವನ್ನು ದೂರ ಮಾಡಿಸುವುದಕ್ಕೆ, ಒಳ್ಳೆಯದು ಮತ್ತು ಕೆಟ್ಟದರ ಅರಿವು ಮೂಡಿಸುವುದಕ್ಕೆ ಕೂಡ ಈ ರಜೆಯ ಸದ್ಬಳಕೆಯನ್ನು ಮಾಡಬಹುದು.

ಒಟ್ಟಿನಲ್ಲಿ ಕೆಟ್ಟ ಚಟಗಳಿಂದ ಮುಕ್ತರನ್ನಾಗಿ ಮಾಡುವುದಕ್ಕೆ ಒಳ್ಳೆಯ ಹವ್ಯಾಸಗಳನ್ನು ಮಕ್ಕಳಲ್ಲಿ ರೂಢಿಸುವುದಕ್ಕೆ ಮತ್ತು ಅವರ ವೈಯಕ್ತಿಕ ಹಾಗೂ ಶೈಕ್ಷಣಿಕ ಬದುಕನ್ನು ಸರಳವಾಗುವಂತೆ ಮಾಡಲು ಈ ರಜೆಯಲ್ಲಿ ಕೆಲವು ಸರಳ ಉಪಾಯಗಳನ್ನು ರೂಢಿಸಿಕೊಳ್ಳಬಹುದು.

- ಮಕ್ಕಳಿಗೆ ರಜೆ ಬಂದರೆ ಸಾಕು, ಮೊದಲು ಗಂಟುಮೂಟೆ ಕಟ್ಟಿ ಅಜ್ಜಿಯ ಮನೆಗೋ, ನೆಂಟರ ಮನೆಗೋ ಹೋಗಲು ಸಿದ್ಧವಾಗಿ ನಿಂತಿರುತ್ತಾರೆ. ಇಂತಹ ಸ್ಥಳ ಬದಲಾವಣೆಯ ಅವಕಾಶವಿರುವ ಮಕ್ಕಳನ್ನು ದಯವಿಟ್ಟು ಕರೆದುಕೊಂಡು ಹೋಗಿ ಆದರೆ ಅಲ್ಲಿ ಅವರ ಚಟಗಳನ್ನು ಬಿಡಿಸುವ ಅವಕಾಶವಿದ್ದರೆ ಮಾತ್ರ, ಇಲ್ಲದೆ ಹೋದರೆ ಅಲ್ಲಿ ಕಳುಹಿಸಿಯೂ ಉಪಯೋಗವಿಲ್ಲದಂತಾಗುತ್ತದೆ ರಜೆ ಹಾಳಾಗುತ್ತದೆ.
- ಕೆಲವು ದಿನಗಳ ಮಟ್ಟಿಗಾದರೂ ಪ್ರವಾಸದ ಯೋಜನೆಯನ್ನು ಮಾಡಿ ಆದರೆ ಪ್ರವಾಸದಿಂದ ಐತಿಹಾಸಿಕ, ವೈಜ್ಞಾನಿಕ ಜ್ಞಾನವನ್ನು ಪಡೆಯುವಂತಿರಬೇಕು. ಮೋಜು ಮಾಡುವುದಕ್ಕೆ ಅವಕಾಶವಿರಬೇಕು, ಮಕ್ಕಳಿಗೆ ಖುಷಿಕೊಡುವ ಜೊತೆಗೆ ಕಲಿಕೆಗೂ ನೆರವಾಗಬೇಕು.
- ಮಕ್ಕಳಿಗೆ ಮನೆಯಲ್ಲೇ ಹಲವಾರು ಕೌಶಲ್ಯಗಳನ್ನು ಕಲಿಸುವ ಪ್ರಯತ್ನ ಮಾಡಬೇಕು. ಹಲವಾರು ಪ್ರಾಜೆಕ್ಟ್‌ಗಳನ್ನು ಮಾಡಿಸಬಹುದು. ಚಿತ್ರಕಲೆ, ಸಂಗೀತ, ನೃತ್ಯ, ಹಾಡು ಕ್ರೀಡೆ ಮುಂತಾದ ಹತ್ತು ಹಲವು ಕೌಶಲ್ಯಗಳನ್ನು ಅಭ್ಯಾಸ ಮಾಡಲು ಸಹಕರಿಸಬೇಕು. ಅದಕ್ಕಾಗಿ ಇರುವ 'ಬೇಸಿಗೆ ಶಿಬಿರ' ಗಳಿಗೆ ಸೇರಿಸಿ ಕೈ ತೊಳೆದು ಕೊಳ್ಳಬೇಡಿ. ರಜೆಯ ಸಮಯದಲ್ಲಾದರೂ ಮಕ್ಕಳ ಜೊತೆ ಕಾಲ ಕಳೆಯಲು ಆದಷ್ಟು ಪ್ರಯತ್ನಿಸಿ. ಮಕ್ಕಳನ್ನು ಗಮನಿಸಿ, ಪ್ರೀತಿ ತೋರಿಸಿ, ಕೇವಲ ಮಕ್ಕಳಿಗೆ ಬೇಕಾದ ತಿನಿಸು ಅಥವಾ ವಸ್ತುಗಳನ್ನು ಕೊಡಿಸುವ ಪ್ರೀತಿ ತೋರದಿರಿ. ಬದಲಾಗಿ ಅವರ ಅಭಿಪ್ರಾಯಕ್ಕೂ ಮನ್ನಣೆ ಕೊಡುವುದರೊಂದಿಗೆ. ಅರಿತು, ಗೌರವಿಸಿ, ಜೊತೆಯಲ್ಲಿದ್ದು ಮಾರ್ಗದರ್ಶಕರಾಗಿ. ಇದರಿಂದ ಅವರ ಯೋಚನಾ ಶಕ್ತಿ ಬೆಳೆದು, ಭದ್ರತಾ ಭಾವನೆ ಬಂದು

**ಪುಟ 10 ಕ್ಕೆ ➤**

➢ ಪುಟ 9 ರಿಂದ..... ಬೇಸಿಗೆ ರಜೆ

ಅವರ ಆತ್ಮಸ್ಥೈರ್ಯ ಹೆಚ್ಚಾಗಿ ಅವರ ಜೀವನ ಪ್ರಗತಿಪಥದತ್ತ ಸಾಗುತ್ತದೆ.

- ಇಂದಿನ ಮಕ್ಕಳಿಗೆ ಗಿಡ, ಮರ, ಬಳ್ಳಿ, ನೆಲ, ಜಲ, ಭೂಮಿ ಒಟ್ಟಾರೆ ಪರಿಸರದ ಅರಿವೇ ಇರುವುದಿಲ್ಲ. ಆ ಕಾರಣಕ್ಕೆ ಮನೆಯ ಮುಂದೆ ಜಾಗವಿದ್ದರೆ ಅಥವಾ ಕುಂಡಗಳಲ್ಲಿ ಗಿಡ ನೆಡುವುದನ್ನು ಉತ್ತೇಜಿಸಿ. ಪ್ರಕೃತಿಯ ಮಹತ್ವವನ್ನು ತಿಳಿಸಿ, ಪರಿಸರದ ಕಾಳಜಿಯನ್ನು ಬೆಳೆಸಿ. ಮಾರ್ಕೆಟ್‌ಗೆ ಕರೆದುಕೊಂಡು ಹೋಗಿ, ಹಣ್ಣು, ತರಕಾರಿ, ಹೂವುಗಳ ಪರಿಚಯ ಮಾಡಿಸಿ. ಇದರಿಂದ ನಿಜ ಜೀವನದ ಅರಿವು ಆಗುತ್ತದೆ. ಕೇವಲ ಮಾಲ್‌ಗಳಿಗೆ ಕರೆದುಕೊಂಡು ಹೋಗಿ artificial life ಮತ್ತು Hi-fi ಜೀವನವನ್ನು ತೋರಿಸಬೇಡಿ. ನೈಸರ್ಗಿಕವಾದ, ನಿಜವಾದ ಜೀವನವನ್ನು ಸವಿಯಲು ಅವಕಾಶ ಮಾಡಿಕೊಡಿ.
- ಇಂದಿನ ಬಹುತೇಕ ಮಕ್ಕಳಿಗೆ, ಪಠ್ಯಪುಸ್ತಕ ಹೊರತು ಪಡಿಸಿ ಬೇರೆ ವಿಷಯಗಳನ್ನು ಓದುವ ಅಭ್ಯಾಸವೇ ಇರುವುದಿಲ್ಲ. ಬೇರೆ ಪುಸ್ತಕಗಳನ್ನು ಓದುವ ಹವ್ಯಾಸವನ್ನು ರಜಾ ದಿನಗಳಲ್ಲಿ ಬಹಳ ಚೆನ್ನಾಗಿ ಅಭ್ಯಾಸ ಮಾಡಿಸಬಹುದು. ಮೊದಲಿಗೆ, ದಿನ ಪತ್ರಿಕೆ ಓದುವುದರಿಂದ ಪ್ರಾರಂಭ ಮಾಡಿ. ಗ್ರಂಥಾಲಯದ ಪರಿಚಯವನ್ನು ಮಾಡಿಸಿ, ಒಳ್ಳೆಯ ಕತೆ ಪುಸ್ತಕಗಳನ್ನು, ವಿಜ್ಞಾನದ ಪುಸ್ತಕಗಳನ್ನು ಓದುವ ಹವ್ಯಾಸ ಬೆಳೆಸಿ, ಇದರಿಂದ ಅವರ ಪ್ರಪಂಚ ಜ್ಞಾನ ಬೆಳೆಯುತ್ತದೆ. ಮುಂದೇ ಇದೇ ಓದುವ ಅಭ್ಯಾಸ ಮುಂದುವರೆದು ಮೊಬೈಲ್, ಟಿವಿಗಳಿಂದ ದೂರ ಉಳಿಯುವ ಸಾಧ್ಯತೆಗಳು ಹೆಚ್ಚಾಗುತ್ತದೆ.
- ಶಾಲೆಯ ಸಮಯದಲ್ಲಿ ಓದುವ, ಬರೆಯುವ ಒತ್ತಡಗಳಿಂದಾಗಿ ಮಕ್ಕಳು ಮನೆಯಲ್ಲಿ ಆಚರಿಸುವ ಸಂಸ್ಕೃತಿ, ಆಚಾರ–ವಿಚಾರ, ಹಬ್ಬ –ಹರಿದಿನದ ಬಗ್ಗೆ ಗಮನ ಹರಿಸಿರುವುದಿಲ್ಲ. ರಜೆಯ ಸಮಯದಲ್ಲಿ ಅವರಿಗೆ ಇವೆಲ್ಲವುಗಳ ಅರಿವು ಮೂಡಿಸುವ ಜವಾಬ್ದಾರಿಯನ್ನು ತೆಗೆದುಕೊಂಡು, ಸಂಸ್ಕಾರ, ಸಂಪ್ರದಾಯಗಳನ್ನು ಪರಿಪಾಲಿಸುವಂತೆ ಹೇಳಿಕೊಡಿ. ಮುಂದೆ ಅವರೇ ನಮ್ಮ ಸಂಪ್ರದಾಯವನ್ನು ಮುಂದುವರಿಸಿಕೊಂಡು ಹೋಗುತ್ತಾರೆ. ಇದು ಹೆತ್ತವರ ಆದ್ಯ ಕರ್ತವ್ಯವೂ ಹೌದು.
- ಸಂಬಂಧಗಳ ಮಹತ್ವವನ್ನು ವಿವರಿಸಿ, ಸಂಬಂಧಿಕರ ಮನೆಗೆ ಕರೆದುಕೊಂಡು ಹೋಗಿ. ಬಂಧು ಬಾಂಧವರ ಬಾಂಧವ್ಯಗಳ ಮೌಲ್ಯವನ್ನು ತಿಳಿಸಿ ಹೇಳಿ. ಚಿಕ್ಕಂದಿನಿಂದಲೇ ಸಂಬಂಧಗಳನ್ನು ನಿಭಾಯಿಸುವುದನ್ನು ಹೇಳಿಕೊಡಿ. ಕೇವಲ ನಾಲ್ಕು ಗೋಡೆಗಳ ಮಧ್ಯೆ ಒಂಟಿಯಾಗಿ ಕಾಲ ಕಳೆಯುವ ಮಕ್ಕಳನ್ನು 'sharing is caring' ಎನ್ನುವುದರ ಅರಿವನ್ನು ಮೂಡಿಸಿ. ಮುಂದೆ ಒಳ್ಳೆಯ ಮಾನವೀಯತೆಯ ಮನುಷ್ಯರಾಗುವುದಕ್ಕೆ ಇದೇ ಕಾರಣವಾಗುತ್ತದೆ. ರಜೆಯ ಸಮಯದಲ್ಲಾದರೂ ಒಟ್ಟಾಗಿ ಸೇರುವ, ಒಟ್ಟಿಗೆ ತಿನ್ನುವ ಪರಿಪಾಠವನ್ನು ಮಾಡಿ ಸಾಮಾಜಿಕ ಪ್ರಜ್ಞೆಯ ಅರಿವನ್ನು ಜಾಗೃತಗೊಳಿಸಿ.
- ಮಕ್ಕಳಲ್ಲಿ ಇರುವ ಪ್ರತಿಭೆಯನ್ನು ಗುರುತಿಸಿ, ರಜೆ ದಿನಗಳಲ್ಲಿ ಅದನ್ನು ಪೋಷಿಸಲು ಪ್ರಯತ್ನಿಸಿ. ಮಕ್ಕಳಲ್ಲಿ ಅನೇಕ ಕಲೆಗಳಿರುತ್ತವೆ. ಶಾಲಾ ಸಮಯದಲ್ಲಿ ಅದರ ಬಗ್ಗೆ ಹೆಚ್ಚಿನ ಗಮನ ಕೊಡಲು ಸಾಧ್ಯವಾಗಿರುವುದಿಲ್ಲ. ಆದ್ದರಿಂದ ರಜಾ ದಿನಗಳಲ್ಲಿ ಅವರ ಕಲೆಗಳನ್ನು ಗುರುತಿಸಿ ಹವ್ಯಾಸಿಗಳನ್ನಾಗಿಸಿ ಮತ್ತು ಪ್ರೋತ್ಸಾಹಿಸಿ ಬೆಳೆಸಲು ಪ್ರಯತ್ನಿಸಿ ಮುಂದೆ ಓದಿನ ಜೊತೆಗೆ ತಮ್ಮ ಹವ್ಯಾಸಗಳನ್ನು ಮುಂದುವರೆಸಿಕೊಂಡು ಹೋಗುವ ಜಾಣ್ಮೆ ಅವರಲ್ಲಿ ಬೆಳೆಯುತ್ತದೆ.

ಒಟ್ಟಿನಲ್ಲಿ ರಜೆ ಶುರುವಾದ ತಕ್ಷಣ ರಜೆಯಲ್ಲಿ ಏನೆಲ್ಲಾ ಮಾಡಬಹುದು ಎಂಬ ವಿವರಗಳನ್ನು ಸಣ್ಣದಾಗಿ ನೋಟ್ ಮಾಡಿಕೊಂಡು ಅದರಂತೆ ಮಾಡಿ. ಇವೆಲ್ಲವುಗಳ ಜೊತೆಗೆ ಶಾಲೆಯ ಪಠ್ಯಪುಸ್ತಕದ ಹೋಮ್‌ವರ್ಕ್ ಮಾಡುವುದಕ್ಕೆ ಸಮಯವನ್ನು ಮೀಸಲಿಡಿ. ಇದರಿಂದ ಪಠ್ಯ ಪುಸ್ತಕಗಳ ನಂಟು ಉಳಿಯುತ್ತದೆ. ಈ ರೀತಿಯ ಪ್ಲಾನ್ ಮಾಡಿ ಅದರಂತೆ ನಡೆಯುತ್ತಾ ಹೋದರೆ ಖಂಡಿತಾ ಮಕ್ಕಳು ಕೆಟ್ಟ ಚಟಗಳಿಂದ ದೂರವಿರಲು ಸಾಧ್ಯವಾಗುತ್ತದೆ. ಕೇವಲ ಪಠ್ಯ ಪುಸ್ತಕದ ಹುಳುವಾಗಿರುವ ಮಕ್ಕಳು ರಜಾ ದಿನಗಳಲ್ಲಿ ಮೋಜಿನ ಜೊತೆ ಜೊತೆಗೆ ಕಲಿಕೆಯನ್ನು ಕಲಿಯುತ್ತಾರೆ. ಗಿಡಿಣಣಾಚಿಟ ಪ್ರಪಂಚಕ್ಕಿಂತ ನಿಜವಾದ ಪ್ರಪಂಚ ಎಷ್ಟು ವಿಭಿನ್ನ ಎಂಬುದನ್ನು ತಿಳಿಸುತ್ತಾ ಪರಿಸರದ ಮಹತ್ವ, ಸ್ವಚ್ಛತೆಯ ಅರಿವು, ಸಂಬಂಧಗಳ ಮೌಲ್ಯ ಮುಂತಾದ ಮಾನವೀಯ ಗುಣಗಳನ್ನು ಈ ರಜೆಯ ಸಮಯದಲ್ಲಿ ಕಲಿಸಿಕೊಡಿ. ಮಕ್ಕಳೇ ದೇಶದ ಆಸ್ತಿ. ಯುವಕರೇ ದೇಶದ ಬೆನ್ನೆಲುಬು ಎಂಬುದನ್ನು ಜಾಗೃತಗೊಳಿಸಿ. ಬಾವಿಯೊಳಗಿನ ಕಪ್ಪೆಗಳಂತಾಗಲು ಬಿಡದೆ ರಜೆಯ ಸಮಯದಲ್ಲಿ ಸ್ವತಂತ್ರವಾಗಿ ಬದುಕುವ ಕಲೆಯನ್ನು, ಶಿಸ್ತನ್ನು ಕಲಿಯಲು ಅವಕಾಶವನ್ನು ಮಾಡಿಕೊಡಿ.

"ಜ್ಞಾನ ಮತ್ತು ಶಿಸ್ತನ್ನು ಬೆಳೆಸಿಕೊಂಡಲ್ಲಿ ಅದು ನಿಮ್ಮನ್ನು ಅನಾವಶ್ಯಕ ಸಮಸ್ಯೆಗಳಿಂದ ರಕ್ಷಿಸುತ್ತದೆ".

●

## ಓದುಗರ ಸ್ಪಂದನೆ

**ಶಿಕ್ಷಕ ಸಮಾಚಾರದಲ್ಲಿ ಬರುವ ಎಲ್ಲಾ ಲೇಖನಗಳು ಉತ್ತಮವಾಗಿರುತ್ತವೆ. ಎಸ್ ಎಸ್ ಎಲ್ ಸಿ ಪರೀಕ್ಷಾ ಕಾರ್ಯದಲ್ಲಿ ಪ್ರೌಢಶಾಲಾ ಶಿಕ್ಷಕರನ್ನು ಕರ್ತವ್ಯದಿಂದ ಹೊರಗೊಳಿಸುವುದನ್ನು ಮನಗಂಡು, ನಮ್ಮ ಮಾಧ್ಯಮಿಕ ಶಿಕ್ಷಕ ಸಂಘವು ಪರೀಕ್ಷಾ ಮಂಡಳಿಗೆ ಮನವಿ ಸಲ್ಲಿಸಿತ್ತು. ಪರೀಕ್ಷ ಮಂಡಳಿಯು ಮನವಿಗೆ ಸ್ಪಂದಿಸಿರುವುದು ಶ್ಲಾಘನೀಯ. ಈ ರೀತಿ ಮಾಹಿತಿಗಳನ್ನು ಈ ಪತ್ರಿಕೆಯಲ್ಲಿ ಹಾಕಿರುವುದು ಸೂಕ್ತವಾಗಿದೆ.**

**– ಗಂಗಪ್ಪ, ಬೆಂಗಳೂರು ವಿಭಾಗ ಪ್ರಮುಖರು, ಕ.ರಾ.ಮಾ.ಶಿ.ಸಂ**

**ಈ ಪತ್ರಿಕೆಯಲ್ಲಿ ಪ್ರಕಟವಾಗಿರುವ ಲೋಕಸಮರ 2024 ನಿರ್ಣಾಯಕ ಎಂಬ ಲೇಖನವು ಪ್ರಸ್ತುತತೆಗೆ ಅತ್ಯಂತ ಸೂಕ್ತವಾದ ಲೇಖನವಾಗಿದೆ. ಮಹಿಳಾ ದಿನದ ಲೇಖನವನ್ನು ಓದಿ ತುಂಬ ಸಂತಸವಾಯಿತು, ಲೇಖಕಿ ನಾಗಲಕ್ಷ್ಮಿಯವರಿಗೆ ಧನ್ಯವಾದಗಳು. ಪತ್ರಿಕೆಯಲ್ಲಿ ಪ್ರಕಟವಾಗಿರುವ ಉಳದೆಲ್ಲಾ ಲೇಖನಗಳು ಉತ್ತಮವಾಗಿವೆ.**

**– ಶ್ರೀಮತಿ ರೋಹಿಣಿ ದೇಶಪಾಂಡೆ, ರಾಜ್ಯ ಮಹಿಳಾ ಪ್ರಮುಖರು, ಕ.ರಾ.ಮಾ.ಶಿ.ಸಂ**

# ಶೈಕ್ಷಣಿಕ ಸವಾಲುಗಳನ್ನು ಎದುರಿಸಲು ನಮ್ಮ ತಯಾರಿ ಹೇಗಿರಬೇಕು?






**ಚಿದಾನಂದ ಆ ಕೇಸ್ಕರ ಪಾಟೀಲ**
ಎಂ.ಎ. ಇತಿಹಾಸ, ಎಂ.ಎ. ಸಮಾಜಶಾಸ್ತ್ರ
ಎಂ.ಎಸ್ಸಿ. ಭೂಗೋಳಶಾಸ್ತ್ರ.
ಅಧ್ಯಾಪಕರು –– ಬೆಳಗಾವಿ.
9449114285, chidapatil@gmail.com


ಭಾರತದ ಗುರು ಪರಂಪರೆಗೆ ಬಹುದೊಡ್ಡ ಇತಿಹಾಸವಿದೆ. ಈ ಗುರು ಪರಂಪರೆಯ ಇಂದಿನ ವಾರುಸುದಾರರಾದ ನಾವುಗಳು ಶೈಕ್ಷಣಿಕ ಪ್ರಗತಿಗಾಗಿ ನಮ್ಮದೇ ಆದ ಸಾಮರ್ಥ್ಯಕ್ಕೆ ಅನುಗುಣವಾಗಿ ತಯಾರಿ ಮಾಡಿಕೊಳ್ಳುವ ಅವಶ್ಯಕತೆ ಇದೆ ಎಂದು ನಮಗೆಲ್ಲ ಅನಿಸದೆ ಇರಲಾರದು. "ಮುಂದಿನ ಭಾರತ ಹೇಗಿರುತ್ತದೆ ಎಂದರೆ ಇಂದಿನ ಶಿಕ್ಷಕರಿದ್ದಂತೆ" ಎನ್ನುವುದು ಇಂದಿಗೆ ಸತ್ಯವಾದ ಮಾತು ಅಲ್ಲವೇ? ಅಧ್ಯಾಪಕರಾಗಿ ಜವಾಬ್ದಾರಿ ಮೊದಲಿನಂತೆ ಸೀಮಿತಿವಾಗಿಲ್ಲ. ವ್ಯಾಪ್ತಿ ವಿಸ್ತರಿಸಿದೆ, ಹೊಸ ಹೊಸ ಸವಾಲುಗಳು ಕಾಲಕಾಲಕ್ಕೆ ಬಂದು ನಿಲ್ಲುತ್ತವೆ. ಅವೆಲ್ಲವುಗಳನ್ನು ಎದುರಿಸಲು ಬೆಂಕಿ ಬಿದ್ದಾಗ ಬಾವಿ ತೋಡುವುದಕ್ಕಿಂತಲೂ ಮೊದಲೇ ತಯಾರಿ ಮಾಡಿಕೊಳ್ಳುವ ಅವಶ್ಯಕತೆ ಇದೆ.

ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಶೈಕ್ಷಣಿಕ ಕ್ಷೇತ್ರದಲ್ಲಿ ತನ್ನದೇ ಆದ ವಿಭಿನ್ನ ಸಮಸ್ಯೆಗಳಿವೆ. ಇವುಗಳ ಪಟ್ಟಿಗೆ ಕೊನೆಯೇ ಇಲ್ಲ. ಆ ಮಧ್ಯದಲ್ಲಿಯೂ ನಾವು ಮನಗಾಣಬೇಕಿರುವುದು "ನಾನು ಆಯ್ಕೆ ಮಾಡಿಕೊಂಡಿರುವ ವೃತ್ತಿ" ಮುಗ್ಧ ಹೃದಯಗಳ ಮಧ್ಯದಲ್ಲಿ ಭವ್ಯ ಭಾರತದ ಕನಸು ಬಿತ್ತುವುದು ಅದನ್ನು ಸಾಧಿಸಲು ಮನಸ್ಸುಗಳನ್ನು ಸಿದ್ಧಮಾಡುವುದು.

## ನಮ್ಮ ತಯಾರಿ ಹೇಗಿರಬೇಕು

ನಮ್ಮ ವಿಷಯಕ್ಕೆ ಅನುಗುಣವಾಗಿ ರಜಾ ಅವಧಿಯಲ್ಲಿಯೇ ಸಂಪನ್ಮೂಲಗಳನ್ನು ವಿವಿಧ ಮೂಲಗಳಿಂದ ನಮ್ಮ ಶಾಲಾ ಮಕ್ಕಳಿಗೆ ಹೊಂದಾಣಿಕೆಯಾಗುವಂತಹ, ನಮ್ಮ ಶೈಕ್ಷಣಿಕ ಪ್ರದೇಶಕ್ಕೆ ಅವಶ್ಯವಿರುವಂತಹ ವಿಷಯ ಸಂಪನ್ಮೂಲಗಳನ್ನು ನಾವು ಕ್ರೋಢೀಕರಣ ಮಾಡಿಕೊಳ್ಳಬೇಕು. ಸಾಧ್ಯವಾದ ಮಟ್ಟಿಗೆ ಸಂಪನ್ಮೂಲಗಳನ್ನು ಅವಶ್ಯಕತೆಗೂ ಅನುಗುಣವಾಗಿ ತಿದ್ದುಪಡಿ ಮಾಡಿಕೊಂಡು ಪ್ರಿಂಟ್ ಮಾಡಿಟ್ಟುಕೊಳ್ಳುವುದು ಒಳ್ಳೆಯದು. ಸಾಫ್ಟ್ ಕಾಪಿಗಳ್ಳು ಮೊಬೈಲ್‌ನಲ್ಲಿ ಸಂಗ್ರಹಿಸಿಟ್ಟುಕೊಳ್ಳುವುದಕ್ಕಿಂತಲೂ ಕಂಪ್ಯೂಟರ್‌ಗಳಲ್ಲಿ ಸಂಗ್ರಹಿಸಿ ಇಟ್ಟುಕೊಳ್ಳುವುದು ಒಳ್ಳೆಯದು.

## ಫಲಿತಾಂಶಗಳ ವಿಶ್ಲೇಷಣೆ

ನಾವು ಬೋಧಿಸುವ ತರಗತಿಗಳ ವಿದ್ಯಾರ್ಥಿಗಳ ಫಲಿತಾಂಶವನ್ನು ವಿಶ್ಲೇಷಿಸುವುದು ಮುಂದಿನ ಕಲಿಕೆಯನ್ನು ಗಟ್ಟಿಗೊಳಿಸುವಲ್ಲಿ ಪ್ರಮುಖವಾದ ಕಾರ್ಯ. ವಿದ್ಯಾರ್ಥಿಗಳ ಪರೀಕ್ಷಾ ಫಲಿತಾಂಶವನ್ನು ಅನೇಕ ದೃಷ್ಟಿಕೋನಗಳಿಂದ ವಿಶ್ಲೇಷಿಸಿಕೊಳ್ಳುವುದು ಮುಂದಿನ ಕಲಿಕೆಯನ್ನು ಗಟ್ಟಿಗೊಳಿಸುವಲ್ಲಿ ಪ್ರಮುಖವಾದ ಕಾರ್ಯ, ಜೊತೆಗೆ ಕಲಿಕೆಯನ್ನು ಇನ್ನಷ್ಟು ಉತ್ತಮಗೊಳಿಸಲು ಏನುಮಾಡಬೇಕು ಎನ್ನುವುದರ ಬಗ್ಗೆ ಕಾರ್ಯ ಯೋಜನೆಯನ್ನು ನಮ್ಮದೇ ಆದ ರೀತಿಯಲ್ಲಿ ಸಿದ್ಧಪಡಿಸಿಕೊಳ್ಳುವುದು ಮುಂದಿನ ದಿನಗಳಲ್ಲಿ ಮಗುವಿನ ಕಲಿಕೆಯನ್ನು ಫಲಕಾರಿಯಾಗಿ ಮಾಡಲು ಇಡುವ ಮೊದಲ ಹೆಜ್ಜೆ.

## ನನ್ನಿಂದ ಅಲ್ಲ, ನಮ್ಮಿಂದ ಎನ್ನುವ ಮನೋಭಾವ

ಮಗುವಿನ ಸರ್ವಾಂಗೀಣ ಅಭಿವೃದ್ಧಿಯೇ ಶಿಕ್ಷಣ. ಹೀಗಾಗಿ ನನ್ನ ವಿಷಯದಲ್ಲಿ ಮಗು ಮುಂದಿದ್ದರೆ ಸಾಲದು ಎಲ್ಲ ವಿಷಯಗಳಲ್ಲಿ ಮಗು ಸಾಧನೆಯತ್ತ ಸಾಗಬೇಕು. ನಾನೊಬ್ಬನೇ ಎಲ್ಲವನ್ನು ಮಾಡಲು ಸಾಧ್ಯವಿಲ್ಲ. ನಾವೆಲ್ಲರು ಎಲ್ಲವನ್ನು ಮಾಡಬಹುದು ಎನ್ನುವುದನ್ನು ಶಿಕ್ಷಕರು, ಮುಖ್ಯ ಶಿಕ್ಷಕರು, ಉಪನ್ಯಾಸಕರು, ಪ್ರಾಚಾರ್ಯರು ಮತ್ತು ಶೈಕ್ಷಣಿಕ ಕಾರ್ಯದಲ್ಲಿರುವವರೆಲ್ಲರೂ ಮನಗಾಣಬೇಕು. ಶಾಲೆಯಲ್ಲಿಯ ಸಾಧನೆ ನನ್ನೊಬ್ಬನಿಂದಲೇ ಅಲ್ಲ ನಮ್ಮೆಲ್ಲರದು ಎನ್ನುವ ಮನೋಭಾವ ಬೆಳೆಸಿಕೊಂಡಲ್ಲಿ ಶೈಕ್ಷಣಿಕ ಪ್ರಗತಿಯ ವೇಗ ಹೆಚ್ಚುತ್ತದೆ.

## ಮಕ್ಕಳನ್ನು ಶಾಲೆಗೆ ಕರೆತರುವುದು

ಗ್ರಾಮೀಣ ಭಾಗದಲ್ಲಿ ಮಕ್ಕಳನ್ನು ಶಾಲೆಗೆ ಕರೆತರುವುದು ಒಂದು ಬಹುದೊಡ್ಡ ಸವಾಲು. ಶಾಲೆಯಲ್ಲಿರುವ ಯಾರೋ ಒಬ್ಬರ ಕಾರ್ಯವಲ್ಲ. ಎಲ್ಲರೂ ಸಮಯ ನೀಡಿ, ಯೋಚಿಸಿ ಅಲ್ಲಿಯ ಸ್ಥಳೀಯ ಸಮಸ್ಯೆಗಳನ್ನು ಮನಗಂಡು ಅದಕ್ಕೆ ಅನುಗುಣವಾಗಿ ಕಾರ್ಯಯೋಜನೆ ರೂಪಿಸಿಕೊಂಡರೆ ಮಕ್ಕಳನ್ನು ಶಾಲೆಗೆ ಕರೆತರುವುದು ಸುಲಭ. ಶಾಲೆಗೆ ಮಕ್ಕಳು ಬರುವಿಕೆ ಪ್ರಾರಂಭ ಮಾಡುವುದು ಗ್ರಾಮೀಣ ಪ್ರದೇಶದಲ್ಲಿ ಹೇಳಿದಷ್ಟು ಸುಲಭವಲ್ಲ. ಆದರೆ ಪ್ರಯತ್ನಿಸಿದರೆ ಎಲ್ಲವೂ ಸಾಧ್ಯ?

## ಶಾಲೆಯ ಚಟುವಟಿಕೆಗಳು ಆಕರ್ಷಕ ಮತ್ತು ಆತ್ಮೀಯವಾಗಿರಬೇಕು

ಶಾಲೆಗಳು ಜೈಲುಗಳಲ್ಲ. ಮಕ್ಕಳನ್ನು ಬಂಧನದಲ್ಲಿಡುವುದೇ ಶಾಲೆಯ ಕಾರ್ಯವೂ ಅಲ್ಲ. ಎರಡು ತಿಂಗಳು ರಜೆ ಅನುಭವಿಸಿರುವ ಮಗು ಶಾಲೆಯ ಪರಿಸರಕ್ಕೆ ಹೊಂದಾಣಿಕೆಯಾಗಲು ಸ್ವಲ್ಪ ಸಮಯದ ಅವಶ್ಯಕತೆ ಇರುತ್ತದೆ. ಹೀಗಾಗಿ ಪ್ರಾರಂಭದ ಕೆಲವು ದಿನಗಳಿಗಾಗಿಯೇ ಪ್ರತ್ಯೇಕವಾಗಿ

ಪುಟ 12 ಕ್ಕೆ ➤

➢ ಪುಟ 11 ರಿಂದ..... ಇತಿಹಾಸದ ವಿಕೃತೀಕರಣ

ಅನೌಪಚಾರಿಕ ವೇಳಾಪಟ್ಟಿಯನ್ನು ಯೋಚಿಸಬೇಕು. ದೈಹಿಕ ಶಿಕ್ಷಣ, ಸಂಗೀತ ಚಿತ್ರಕಲೆ ಇಂತಹ ವಿಷಯಗಳು ಕಡೆಗೆ ಹೆಚ್ಚು ಗಮನಕೊಡುವುದರ ಜೊತೆಗೆ ಮಕ್ಕಳಲ್ಲಿರುವ ಅಭಿರುಚಿಯನ್ನು ಗುರುತಿಸುವ ಕಾರ್ಯ ಮಾಡುವುದು ತುಂಬಾ ಅವಶ್ಯ. ಪ್ರಾರಂಭದಲ್ಲಿಯೇ ಅತಿಯಾದ ಭಯದ ವಾತಾವರಣ ಇರದಂತೆ ನೋಡಿಕೊಳ್ಳಬೇಕು. ಮಕ್ಕಳೊಂದಿಗೆ ಮುಖ್ಯೋಪಾಧ್ಯಾಯರಾದಿಯಾಗಿ ಎಲ್ಲರು ಆತ್ಮೀಯವಾಗಿ ವರ್ತಿಸುವುದು ಅವಶ್ಯಕ. ಒಟ್ಟಾರೆ ಮಗುವಿಗೆ ಶಾಲೆ ನನ್ನದು, ಇಲ್ಲಿರುವವರೆಲ್ಲ ನನಗಾಗಿ, ನನ್ನ ಒಳಿತಿಗಾಗಿ ಇರುವವರು ಎಂದು ಎನಿಸಿದರೆ ಅರ್ಧ ವರ್ಷ ಮುಗಿದಂತೆ ಸರಿ. ಒಳ್ಳೆಯ ಪ್ರಾರಂಭ ಅರ್ಧ ಕೆಲಸ ಮುಗಿದಂತೆ ಎನ್ನುವ ಮಾತು ಸತ್ಯವಾದದ್ದು.

## ಪೂರ್ವಾಗ್ರಹದಿಂದ ಹೊರಬರೋದು

ವಿದ್ಯಾರ್ಥಿಗಳ ಬಗ್ಗೆ ಆಗಿರಲಿ, ಇಲ್ಲವೇ ಸಹೋದ್ಯೋಗಿಗಳ ಬಗ್ಗೆ ಆಗಿರಲಿ ಪೂರ್ವಗ್ರಹದಿಂದ ಹೊರಬರಬೇಕು. ಅನೇಕ ಒತ್ತಡಗಳಿಂದ ಅಥವಾ ಯಾವುದೇ ಕಟ್ಟಲೆಗಳಿಂದ ಯಾವುದೇ ಸಹಿಸಲಸಾಧ್ಯವಾದ ಕಾರ್ಯ ಈ ಮೊದಲು ಘಟಿಸಿರಬಹುದು. ಅದನ್ನೇ ಮುಂದುವರೆಸುವುದು ಎಷ್ಟು ಸರಿ. ತಪ್ಪನ್ನು ತಿದ್ದಿಕೊಳ್ಳುವ ಅವಕಾಶ ಕೊಡಬೇಕಲ್ಲವೆ. ಅಂದು ಸಮಯ ಸಂದರ್ಭಗಳು ಹಾಗಿರಬಹುದು. ಆದರೆ ಇಂದು ಬದಲಾಗಿರುತ್ತದೆ. ವೃತ್ತಿ ಜೀವನದಲ್ಲಿ ಬರುವ ಕಹಿ ಘಟನೆಗಳು ನಮ್ಮ ಜೀವನ ರೂಪಿಸಲು ಪ್ರಾರಂಭಿಸಿದರೆ ಸಿಹಿ ಘಟನೆಗಳೇ ಮುಚ್ಚಿಹೋಗುತ್ತವೆ.

## ಇಲಾಖೆ ಬಯಸುವ ದಾಖಲೆಗಳು

ಇಲಾಖೆಯ ಪಾಠದ ಗುಣಮಟ್ಟ ಹೆಚ್ಚಿಸುವ ಸಂಬಂಧ ಮತ್ತು ಕಲಿಕೆ ಪರಿಣಾಮಕಾರಿಯಾಗಲಿ ಎನ್ನುವ ದೃಷ್ಟಿಕೋನದಿಂದ ವಾರ್ಷಿಕ ಪಾಠಯೋಜನೆ, ಘಟಕ ಪಾಠ ಯೋಜನೆ, ವಾರ್ಷಿಕ ಕ್ರಿಯಾ ಯೋಜನೆ, ಮಕ್ಕಳ ದಾಖಲೆಗಳನ್ನು ಅಧ್ಯಾಪಕರಾದವರು ಇಡುವುದು ಅವಶ್ಯ. ಇದರ ಜೊತೆಯಲ್ಲಿ ವಿಷಯಾಧಾರಿತ ಶಾಲಾ ಸಂಘಗಳು ಮತ್ತು ವಿವಿಧ ಶಾಲಾ ಸಂಘಗಳ ರಚನೆ ಮತ್ತು ವರ್ಷದಲ್ಲಿ ನಡೆಸುವ ಚಟುವಟಿಕೆಗಳ ದಾಖಲೆಗಳು ಶಾಲೆಯಲ್ಲಿಯ ಅಧ್ಯಾಪಕರ ಕ್ರಿಯಾಶೀಲತೆಯನ್ನು ತೋರಿಸುತ್ತವೆ.

## ಜೀವನೋತ್ಸಾಹ

ಹಸಿದ ಮಗು ತಾಯಿ ನೀಡುವ ಎದೆಹಾಲ ಕುಡಿದು ಸಂತೋಷವಾಗಿ ಆಟವಾಡಲು ಪ್ರಾರಂಭಿಸಿದ್ದನ್ನು ಕಂಡ ತಾಯಿಗೆ ಆಗುವ ಸಂತೋಷಕ್ಕೆ ಬೆಲೆಕಟ್ಟಲು ಸಾಧ್ಯವೇ? ಹಾಗೆ ಪ್ರತಿ ತರಗತಿಯಲ್ಲಿ ನಾವು ಮಾಡುವ ಪಾಠ ಮಕ್ಕಳಿಗೆ ತಲುಪಲು ನಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಪ್ರಯತ್ನಿಸುವುದು ಮತ್ತು ವರ್ಷಗಳು ಕಳೆದಂತೆ ಬದಲಾದ ಕಾಲಘಟಕ್ಕೆ ತಕ್ಕಂತೆ ಹೊಸ ಹೊಸ ವಿಷಯಗಳನ್ನು ಅರಿತು ಮಕ್ಕಳಿಗೆ ತಿಳಿಸುವುದು ಹಾಗೂ ಮಕ್ಕಳ ಪ್ರಗತಿಯಲ್ಲಿ ತನ್ನ ಸಂತೋಷವನ್ನು ಕಾಣುವುದು ಶಿಕ್ಷಕರಾದ ನಮ್ಮೆಲ್ಲರ ಕನಸು ಹೌದು.

## ಆಲಿಸುವುದು ಮತ್ತು ಸ್ವೀಕರಿಸುವುದು

ಜೀವನದಲ್ಲಿ ಅಸಾಧ್ಯವಾದದ್ದು ಯಾವುದೂ ಇಲ್ಲ, ನಾವು ಪ್ರಯತ್ನಿಸಬೇಕು. "ನನ್ನ ಕೈ ಯಾವಾಗಲೂ ಮುಗಿದಿರಲಿ ನನ್ನ ತಲೆ ಯಾವಾಗಲು ಬಾಗಿರಲಿ" ಎಂದು ಶರಣರು ಹೇಳಿದ್ದು ಇದೇ ಕಾರಣಕ್ಕೆ ಇರಬೇಕು. ಅಂದರೆ ವಿನಯ ಮತ್ತು ಪರರಿಗೆ ಗೌರವಕೊಡುವ ಗುಣವನ್ನು ಬೆಳೆಸಿಕೊಂಡಲ್ಲಿ ನಾವು ಹೆಚ್ಚು ಹೆಚ್ಚು ಕಲಿಯುತ್ತಾ ಹೋಗುತ್ತೇವೆ. "ನಾ" ಎನ್ನುವುದನ್ನು ಬಿಟ್ಟು ಬೇರೆಯವರು ಹೇಳುವ ವಿಷಯಗಳನ್ನು ಕೇಳಿಸಿಕೊಳ್ಳುವುದು ಮತ್ತು ನಮ್ಮ ನಡೆಯಲ್ಲಿಯ ತಪ್ಪುಗಳನ್ನು ಸ್ವೀಕರಿಸಿ ಮುಂದೆ ಸಾಗುವುದು ಶೈಕ್ಷಣಿಕ ಕ್ಷೇತ್ರದಲ್ಲಿರುವ ನಮಗೆಲ್ಲ ಇರಬೇಕಾದ ಗುಣ ಅಲ್ಲವೇ.

ಇಂದು ತಂತ್ರಜ್ಞಾನದ ಯುಗದ ಕಾಲದಲ್ಲಿದ್ದೇವೆ. ಪ್ರತಿ ದಿನವು ಹೊಸ ಹೊಸ ಆವಿಷ್ಕಾರಗಳಾಗುತ್ತಿವೆ. ಆ ಆವಿಷ್ಕಾರಗಳು ಶೈಕ್ಷಣಿಕ ಕ್ರಾಂತಿಯನ್ನು ಮಾಡುತ್ತಿವೆ. ಚಾಕ್, ಟಾಕ್ ಮತ್ತು ಬೋರ್ಡ್ ದಿಂದ ಪಾಠಮಾಡುವ ಯುಗದ ಹಂತದಲ್ಲಿ ಇದ್ದೇವೆ. ಹೊಸ ತಂತ್ರಜ್ಞಾನ, ಕೌಶಲ್ಯಗಳು, ಪದ್ಧತಿಗಳು, ರೀತಿಗಳು, ಶೈಕ್ಷಣಿಕ ಕ್ಷೇತ್ರದಲ್ಲಿ ಕಾಲಿಟ್ಟಿವೆ. ನಾವು ಇಂದು ಯಾವುದೇ ವಯಸ್ಸಿನಲ್ಲಿರಬಹುದು, ಇಲ್ಲವೇ ನಿವೃತ್ತಿಯ ಅಂಚಿನಲ್ಲಿರಬಹುದು. ಅವೆಲ್ಲವುಗಳನ್ನು ಅಳವಡಿಸಿಕೊಳ್ಳುವ ಪ್ರಯತ್ನವನ್ನು ನಿರಂತರವಾಗಿ ಮಾಡುವುದು ಅವಶ್ಯಕತೆ ಇದೆ. ನಾವು ಹಾಗೆ, ಹೀಗೆ ಕಲಿಸಿದ್ದೆ ಎನ್ನುವ ವಾದವನ್ನು ಬಿಟ್ಟು, ಇಂದಿನ ಕಲಿಕಾರ್ಥಿಗಳಿಗೆ ಅವಶ್ಯವಿರುವುದನ್ನು ಕಲಿತು, ಕಲಿಸುವುದನ್ನು ರೂಢಿಸಿಕೊಳ್ಳುವುದೇ ಇಂದಿನ ಅವಶ್ಯಕತೆಯೂ ಹೌದು. ಕಲಿಕಾರ್ಥಿಗಳು ಅನೇಕ ಮೂಲಗಳಿಂದ ವಿಷಯದ ಮಾಹಿತಿ ಪಡೆಯುತ್ತಿದ್ದಾರೆ. ವಿಷಯದ ಆಳಕ್ಕೆ ಇಳಿಯುತ್ತಿದ್ದಾರೆ. ಹಾಗೆ ಅಧ್ಯಾಪಕನಾದವನು ವಿಷಯವನ್ನು ಅರಿತುಕೊಳ್ಳದಿದ್ದರೆ ಕಲಿಕೆ ಪರಿಣಾಮಕಾರಿಯಾಗಿರುವುದಿಲ್ಲ ಮತ್ತು ಕಲಿಸುವವರ ಮತ್ತು ಕಲಿಕಾರ್ಥಿಯ ಮಧ್ಯ ಕಂದಕ ಉಂಟಾಗುತ್ತದೆ. ಇದು ಕಲಿಕೆಯ ದೃಷ್ಟಿಯಿಂದ ಒಳ್ಳೆಯ ಬೆಳವಣಿಗೆಯಲ್ಲ.

## ಸಂಬಳಕ್ಕಾಗಿ ಅಲ್ಲ ಸಮಾಜಕ್ಕಾಗಿ

ಪ್ರಾಚೀನ ಕಾಲದಿಂದಲು ಅಧ್ಯಾಪಕನಿಗೆ ಸಮಾಜದಲ್ಲಿ ಎತ್ತರದ ಗೌರವವಿದೆ. ಇಂದು ಸಹ ಉಳಿದಂತಹ ಎಲ್ಲ ವೃತ್ತಿಗಳಿಗಿಂತಲೂ ಸಮಾಜದಲ್ಲಿ ಗೌರವ ಭಾವನೆ ಇದ್ದೇ ಇದೆ. ನಾವು ಹೇಗಿದ್ದೆವೊ ಹಾಗೇ ನಮ್ಮ ಪ್ರತಿಬಿಂಬವನ್ನು ಕನ್ನಡಿಯಲ್ಲಿ ಕಾಣುತ್ತೇವೆ. ಕಾರಣ ಯಾವುದೇ ಇರಬಹುದು ಈ ವೃತ್ತಿಗೆ ಬಂದಾಗಲೇ ಈ ವೃತ್ತಿಯ ಗೌರವ ಹೆಚ್ಚಿಸುವ ಪ್ರಯತ್ನದಲ್ಲಿ ನಾವಿದ್ದರೆ ನಮ್ಮ ಗೌರವ ಸಹಜವಾಗಿಯೇ ಹೆಚ್ಚಾಗುತ್ತದೆ. ನಾವು ಹಾಕಿಕೊಳ್ಳುವ ಬಟ್ಟೆ ಮಾತನಾಡುವ ಭಾಷೆ, ನಾವು ಉಪಯೋಗಿಸುವ ವಸ್ತಗಳು ನಮ್ಮ ರೀತಿ, ನೀತಿ ಪ್ರತಿಯೊಂದು ಕಲಿಕಾರ್ತಿಯ ಮೇಲೆ ಪರಿಣಾಮ ಬೀರುತ್ತಿರುತ್ತವೆ. ಹೀಗಾಗಿ ನಮ್ಮ ವೃತ್ತಿಯನ್ನು ಸಮಾಜದ ಪರಿವರ್ತನೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ವೈಯಕ್ತಿಕ ಸಮಸ್ಯೆಗಳು ಏನೇ ಇದ್ದರು, ಶಾಲೆಯಿಂದ ಆಚೆಗೆ ಬಿಟ್ಟು ಬಂದರೆ ಈ ವೃತ್ತಿ ಬದುಕಿಗೆ ಒಂದು ಅರ್ಥ ಬರುತ್ತದೆ ಎನ್ನುವುದು, ಈ ವೃತ್ತಿಯಲ್ಲಿ ಯಶಸ್ಸು ಕಂಡವರ ಮಾತು.

ಹೀಗೆಲ್ಲ ಇರುವ ಸವಾಲುಗಳ ಮಧ್ಯದಲ್ಲಿಯೂ ಹೊಸ ಸವಾಲುಗಳು ನಮ್ಮ ಮುಂದೆ ಬಂದು ನಿಲ್ಲುತ್ತವೆ. ಆ ಎಲ್ಲವುಗಳನ್ನು ಎದುರಿಸುವುದಕ್ಕೆ ನಮ್ಮ ಧನಾತ್ಮಕ ಮನೋಭಾವ ಬೆಳೆಸಿಕೊಳ್ಳುವುದು ಒಂದು ಸವಾಲು ಅಲ್ಲವೇ?

●

ಯಾವ ಪ್ರತಿಫಲವನ್ನೂ ಬಯಸದ ದಯಾಸಿಂಧುವೇ ನಿಜವಾದ ಗುರು. – ಶಂಕರಾಚಾರ್ಯ.

➢ ಪುಟ 3 ರಿಂದ.....

ಪ್ರಜಾ ಧರ್ಮ

ಸಂಪತ್ತೆನಿಸುತ್ತವೆ ಅಂದರೆ ಕಾಯಾ, ವಾಚಾ, ಮನಸಾ ಅವನ ವ್ಯಕ್ತಿತ್ವ ಪರಿಶುದ್ಧವಾಗಿರಬೇಕಾದುದು ಅಗತ್ಯ. ಈ ರಾಜ ಧರ್ಮವೇ ಪ್ರಸ್ತುತದ ಆಡಳಿತ ವಿಭಾಗದ್ದೂ ಆಗಿರುತ್ತದೆಯೆಂಬುದು ಗಮನಾರ್ಹ.

ಪ್ರಜಾಧರ್ಮದ ಪಾಲನೆಯೂ ಸಹ ರಾಜಧರ್ಮದಷ್ಟೇ ಮುಖ್ಯವಾದುದು. ಏಕೆಂದರೆ ಆತ ಸಮಾಜದ ಒಂದು ಮುಖ್ಯ ಅಂಗವಾಗಿರುತ್ತಾನೆ. ಅಂದಿನ ರಾಜಾಧಿಕಾರದ ಪ್ರಜೆಯೇ ಇಂದಿನ ಪ್ರಜಾ ಸರ್ಕಾರದ ಒಂದು ಭಾಗವೂ ಆಗಿರುವುದರಿಂದ ಅವೆಲ್ಲ ಕರ್ತವ್ಯಗಳೂ ಈಗಲೂ ಅನ್ವಯಿಸುತ್ತವೆ. ಇಂದು ಪ್ರಜೆಗಳೇ ಪ್ರಭುಗಳಾಗಿರುವುದರಿಂದ ಅವರು ಆಯ್ಕೆಮಾಡುವವರೇ ದೇಶವನ್ನು ಆಳುವ ಅವರ ಪ್ರತಿನಿಧಿಗಳಾಗಿರುತ್ತಾರೆ. ಹಾಗಾಗಿ ಯೋಗ್ಯರಾದವರನ್ನು ಆರಿಸುವ ಮಹತ್ತರ ಹೊಣೆಗಾರಿಕೆ ಪ್ರಜೆಗಳದ್ದಾಗಿರುತ್ತದೆ. ಅವರ ಆಯ್ಕೆ ತಪ್ಪಾದಲ್ಲಿ ಅಪಾತ್ರರ ಕೈಗೆ ದೇಶವನ್ನು ಒಪ್ಪಿಸಿದ ತಪ್ಪು ಪ್ರಜೆಗಳದ್ದೇ ಆಗಿರುತ್ತದೆ.

ನಮ್ಮ ಪ್ರಸ್ತುತದ ಸಂವಿಧಾನದಲ್ಲಿ ಸಹ ಮಾನವರ ಮೂಲಭೂತ ಹಕ್ಕುಗಳನ್ನು ತಿಳಿಸಿರುವಂತೆಯೇ ಅವರ ಕರ್ತವ್ಯಗಳನ್ನೂ ತಿಳಿಸಲಾಗಿದೆ. ಏಕೆಂದರೆ ಸಮಾಜದ ಸರ್ವತೋಮುಖವಾದ ಆರೋಗ್ಯವನ್ನು ರಕ್ಷಿಸಿಕೊಂಡು ಹೋಗುವಲ್ಲಿ ಅವರ ಹೊಣೆಗಾರಿಕೆಯೂ ಪ್ರಧಾನ ಪಾತ್ರವನ್ನೇ ವಹಿಸುವುದರಿಂದ ಅವರಿಂದಲೂ ಕರ್ತವ್ಯ ಲೋಪಗಳಾಗದಿರುವಂತೆ ಎಚ್ಚರಿಕೆ ವಹಿಸುವುದು ಅಗತ್ಯವಾಗಿರುತ್ತದೆ. ಸಮಾಜದಲ್ಲಿ ನ್ಯಾಯ, ನೀತಿ, ಧರ್ಮದ ಪಾಲನೆಯಲ್ಲಿ ಪ್ರತಿಯೊಬ್ಬರ ಕೊಡುಗೆಯೂ ಮುಖ್ಯವೇ. ಸುಸಂಸ್ಕೃತ, ಸುಭಿಕ್ಷ ಸಮಾಜದ ನಿರ್ಮಾಣದ ಕಾರ್ಯದಲ್ಲಿ ಆಸಕ್ತಿ ತೋರದ ಅಥವಾ ಅದಕ್ಕೆ ಅಡ್ಡಿಯುಂಟುಮಾಡುವ ನಾಯಕನಿದ್ದರೆ ಅಂತಹ ಅನರ್ಹ ನಾಯಕನನ್ನು ಅಧಿಕಾರದಿಂದ ಕೆಳಗಿಳಿಸಬೇಕಾದುದೂ ಅವನ ಕರ್ತವ್ಯವಾಗಿರುತ್ತದೆ. ಅನ್ಯಾಯವನ್ನು ಮಾಡದಿರುವುದು ಮಾತ್ರವೇ ಅಪರಾಧವಾಗುವುದಿಲ್ಲ, ಅನ್ಯಾಯವನ್ನು ಸಹಿಸುವುದಾಗಲೀ, ಅದಕ್ಕೆ ಸಹಕರಿಸುವುದಾಗಲೀ ಕೂಡ ಅಪರಾಧವೇ ಆಗುತ್ತದೆ. ಮೌನವಾಗಿರುವುದೂ ಸಹ ಅಪರಾಧದ ಒಂದು ಭಾಗವೇ ಆಗುತ್ತದೆ. ಆದ್ದರಿಂದ ಅದನ್ನು ತಡೆಗಟ್ಟುವುದು ಅವನ ಮುಖ್ಯ ಜವಾಬ್ದಾರಿಯಾಗಿರುತ್ತದೆ. ಸಮಾಜದ ಋಣವನ್ನು ತೀರಿಸಬೇಕಾದುದು ಪ್ರತಿಯೊಬ್ಬರ ಕರ್ತವ್ಯವಾಗಿರುತ್ತದೆ.

ಸಮಾಜದ, ರಾಜ್ಯದ, ರಾಷ್ಟ್ರದ ಹಿತವನ್ನು ಕಾಪಾಡುವಲ್ಲಿ ಅದರ ಹೊರಗಿನ ಮತ್ತು ಒಳಗಿನ ಸ್ವಾಸ್ಥ್ಯವನ್ನು ಉಳಿಸುವಲ್ಲಿ ಪ್ರತಿಯೊಬ್ಬ ಪ್ರಜೆಯ ಪಾತ್ರ ಮುಖ್ಯವೆಂದಾಯಿತು. ಅಂದರೆ ಇಡೀ ಸಮಾಜದ ನೈತಿಕತೆಯನ್ನು ಉಳಿಸಿದಲ್ಲಿ ಅದರ ಆರೋಗ್ಯವೂ ಉಳಿಯುವುದೆಂದಾಯಿತು. ಈ ಜವಾಬ್ದಾರಿ ಪ್ರತಿಯೊಬ್ಬ ಪ್ರಜೆಯ ಕರ್ತವ್ಯವಾಗುತ್ತದೆ. ಅದೇ ಪ್ರಜಾಧರ್ಮ. ಆತನ ಸೂಕ್ತ ನಡವಳಿಕೆಯೇ ಈ ಜವಾಬ್ದಾರಿ ನಿರ್ವಹಣೆಗೆ ನೆರವಾಗುವುದು. ರಾಜಧರ್ಮ ಮತ್ತು ಪ್ರಜಾಧರ್ಮ ಎರಡನ್ನೂ ಇಬ್ಬರೂ ವ್ಯವಸ್ಥಿತವಾಗಿ ಪಾಲಿಸಿದಾಗಲೇ ಆ ರಾಷ್ಟವು ಅಭಿವೃದ್ಧಿಯ ದಾರಿಯಲ್ಲಿ ಸಾಗಲು ಸಾಧ್ಯವಾಗುವುದು. ಈ ನೀತಿಯು ಎಲ್ಲ ಕಾಲಕ್ಕೂ ಎಲ್ಲ ರಾಷ್ಟ್ರಗಳೂ ಅನುಸರಿಸಬೇಕಾದ ತತ್ತ್ವವಾಗಿದೆ. ಇಬ್ಬರೂ ತಮ್ಮ ತಮ್ಮ ಈ ಧರ್ಮವನ್ನು ತಪ್ಪದೇ ಪಾಲಿಸತಕ್ಕದ್ದು. ●

➢ ಪುಟ 6 ರಿಂದ.....

ಹಿಂದೂ ಧರ್ಮ

ಇಡೀ ಜಗತ್ತಿಗೆ ಉದಾತ್ತ, ಉತ್ಕೃಷ್ಟ ವಿಚಾರಧಾರೆಯನ್ನು ನೀಡಿದೆ. ವಸುದೈವ ಕುಟುಂಬಕಮ್' ಹಾಗೂ 'ಸರ್ವೇ ಭವಂತು ಸುಖಿನಃ' ಎಂಬ ಘೋಷ ವಾಕ್ಯಗಳು ಜಗತ್ತಿಗೆ ಜ್ಞಾನದ ಬೆಳಕನ್ನು ನೀಡಿರುವುದು ಅಷ್ಟೇ ಸತ್ಯ. ಯಾರು ಶ್ರೇಷ್ಠರಲ್ಲ, ಯಾರೂ ಕೀಳಲ್ಲ, ಎಲ್ಲರೂ ಸಮೃದ್ಧಿಯತ್ತ ಸಾಗುತ್ತಿರುವ ಸಹೋದರರು ಎಂಬುದು ಹಿಂದೂ ಧರ್ಮವನ್ನು 'ಮಾನವ ಧರ್ಮ' ವಾಗಿ ಮನ್ವಂತರಗೊಳಿಸಿದೆ. ಹಿಂದೂಧರ್ಮ 'ವಿಶ್ವಧರ್ಮ'ವಾಗಿದೆ. ಎಲ್ಲರ ಒಳಿತನ್ನು ಬಯಸುವ, ಸಮಸ್ತ ಮನುಕುಲದ ಉದ್ಧಾರದ ಬಗ್ಗೆ ತಿಳಿಸುವ ಏಕಮೇವ ಧರ್ಮವೆಂದರೆ ಅದು ಹಿಂದೂ ಧರ್ಮವೇ ಆಗಿದೆ.

ಹಿಂದೂ ಧರ್ಮದಲ್ಲಿರುವ ಧಾರ್ಮಿಕ ನಂಬಿಕೆಗಳು ವೈಜ್ಞಾನಿಕತೆಯಿಂದ ಕೂಡಿದ್ದು, ಬದುಕಿನ ಉನ್ನತಿಗೆ ನೆರವಾಗಿವೆ. ಯಾವುದೇ ಒಬ್ಬ ವ್ಯಕ್ತಿ ತನ್ನ ಜೀವಿತದಲ್ಲಿ ನಾಲ್ಕು ಗುರಿಗಳನ್ನು ತಲುಪಬೇಕಾಗುತ್ತದೆ. ಅವುಗಳೆಂದರೆ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ. ಮೋಕ್ಷವನ್ನು ಪಡೆದ ನಂತರ ವ್ಯಕ್ತಿಯು ಜನ್ಮ ಚಕ್ರದಿಂದ ಮುಕ್ತಿ ಹೊಂದಿ ಆತನ ಆತ್ಮ ಪರಮಾತ್ಮನಲ್ಲಿ ಲೀನವಾಗುತ್ತದೆ ಎಂಬುದು ಪ್ರತಿಯೊಬ್ಬ ಭಾರತೀಯನನ್ನು ತನ್ನ ಜೀವಿತದಲ್ಲಿ ಸನ್ಮಾರ್ಗದಲ್ಲಿ ನಡೆಯುವಂತೆ ಪ್ರೇರೇಪಿಸುತ್ತದೆ.

ಪ್ರತಿಯೊಬ್ಬ ಹಿಂದೂ ಪ್ರಕೃತಿಯನ್ನು ದೇವರೆಂದು ಪರಿಭಾವಿಸುತ್ತಾನೆ. ಪ್ರಕೃತಿಯಲ್ಲಿನ ಗಿಡ, ಮರ, ಬೆಟ್ಟ, ಗುಡ್ಡ, ಕಲ್ಲು, ನದಿ ಎಲ್ಲವನ್ನು ಪೂಜ್ಯಭಾವದಿಂದ ಪರಿಭಾವಿಸುತ್ತಾನೆ. ಇಂತಹ ಮನಸ್ಥಿತಿ ಮಾತ್ರ ಜಗತ್ತನ್ನು ಉದ್ಧರಿಸಲು ಸಾಧ್ಯ ಎಂಬುದನ್ನು ಹಿಂದೂ ಧರ್ಮ ಪ್ರತಿಪಾದಿಸುವುದರಿಂದ ಇದು ಉತ್ಕೃಷ್ಟ ಜೀವನಕ್ರಮವಾಗಿದೆ. ನಮ್ಮ ಅಸ್ತಿತ್ವವನ್ನು ಎಷ್ಟು ಗೌರವಿಸುತ್ತೇವೆಯೋ ಅದೇ ರೀತಿ ಇತರ ಪ್ರಾಕೃತಿಕ ವಸ್ತುಗಳ ಅಸ್ತಿತ್ವವನ್ನು ಗೌರವಿಸುವುದು ಸಹ ಹಿಂದೂ ಧರ್ಮದ ಪ್ರಬಲ ಆಶಯವಾಗಿದೆ. ಪರಹಿತವಾದ ಹಿಂದೂ ಧರ್ಮದ ಮೂಲ ಸತ್ವವಾಗಿದೆ. ಆದ ಕಾರಣ ಹಿಂದೂ ಧರ್ಮವೆಂದರೆ ಅದೊಂದು ಜೀವನ ಕ್ರಮವಾಗಿದೆ.

ಹಿಂದೂ ಧರ್ಮದ ಇತಿಹಾಸ ವೇದಗಳೊಂದಿಗೆ ಉಗಮವಾಗಿದೆ. ಆದಕಾರಣ ಭಾರತೀಯರು ವೇದಗಳನ್ನು ಗೌರವದಿಂದ ಸ್ವೀಕರಿಸಿದ್ದಾರೆ. ಮೋಕ್ಷದ ಮಾರ್ಗಗಳು ವಿಭಿನ್ನ ಮತ್ತು ವೈವಿಧ್ಯವಾಗಿವೆ ಹಾಗೂ ಸತ್ಯದ ಸಾಕ್ಷಾತ್ಕಾರವೇ ನಿಜವಾದ ಬದುಕು. ಸತ್ಯ ದರ್ಶನವಿಲ್ಲದ ಜೀವನ ವ್ಯರ್ಥ ಎಂಬ ವಿಶೇಷ ಅಂಶಗಳ ಸಂಗಮವೇ ಹಿಂದೂ ಧರ್ಮವಾಗಿದೆ. ಹಿಂದೂ ಧರ್ಮವೆಂದರೆ 'ಸರ್ವಧರ್ಮ ಸಮಭಾವ', 'ಧರ್ಮ ಸಮಾನತೆಯ ಸಹಿಷ್ಣುತೆ' ಆದಕಾರಣ ಹಿಂದೂ ಧರ್ಮವನ್ನು ಕೇವಲ ಒಂದು ಮತವಾಗಿ ಪರಿಗಣಿಸದೆ ವಿಶಾಲಾರ್ಥದಲ್ಲಿ ಸಮಸ್ತ ಮನುಕುಲದ ಉದ್ಧಾರಕ್ಕೆ ಇರುವ ಏಕೈಕ ಮಾರ್ಗವೆಂದರೆ ಅತಿಶಯೋಕ್ತಿಯಲ್ಲ. ನಿಸ್ಸಂದೇಹವಾಗಿ ಹಿಂದೂ ಧರ್ಮವೆಂದರೆ ಅದೊಂದು ಜೀವನ ಕ್ರಮ' ಎಂಬುದು ಅತ್ಯಂತ ಸೂಕ್ತವಾದುದು. ಇದು ಕಾಲಾತೀತ, ದೇಶಾತೀತ ಮತ್ತು ಜನಾಂಗತೀತವಾದದ್ದು. ಭಾರತೀಯರಾಗಿ ನಾವೆಲ್ಲರೂ ಇಂತದೊಂದು ಉತ್ಕೃಷ್ಟ ಜೀವನ ಕ್ರಮದ ಉತ್ತರದಾಯತ್ವ ಹೊಂದಿರುವ ವಾರಸುದಾರರು ಎಂದರೆ ಉತ್ಪ್ರೇಕ್ಷೆಯಲ್ಲ. ●

ಮನಸ್ಸೇ ಸಂಸಾರ ಬಂಧನಕ್ಕೆ ಕಾರಣವಾದ ಅವಿದ್ಯೆಯು. – ಶಂಕರಾಚಾರ್ಯ.

➢ ಪುಟ 8 ರಿಂದ..... ಯುಗಾದಿ

ವರ್ಷದ ಆರಂಭದಲ್ಲೇ ತಿಳಿದು ಕೊಳ್ಳಬಹುದು. ಪಂಚಾಂಗ ಕೇಳುವುದರಿಂದ ಮಾನವನ ಆಯುಷ್ಯ ಹೆಚ್ಚಾಗುತ್ತದೆ. ರೋಗ ಪಾಪಗಳು ನಾಶವಾಗಿ ಗಂಗಾಸ್ನಾನ ಮಾಡಿದಷ್ಟು ಫಲಸಿಗುತ್ತದೆ. ಬೇವು– ಬೆಲ್ಲ ಸೇವನೆ ಮಾಡುತ್ತಾರೆ.

**ಶತಾಯುರ್ವಜ್ರದೇಹಾಯ ಸರ್ವಸಂತ್ಕರಾಯ ಚ ।**
**ಸರ್ವಾರಿಷ್ಟವಿನಾಶಾಯ ನಿಂಬಕಂ ದಳಭಕ್ಷಣಮ್ ॥**

ಎಂಬ ಶ್ಲೋಕವನ್ನು ಅನುಸಂಧಾನ ಮಾಡಿ, ದೇವರಿಗೆ ನಿವೇದಿಸಿದ ಎಳೆಯ ಬೇವಿನ ಎಲೆಗಳನ್ನು ಸೇವಿಸಬೇಕು. ಬೇವು–ಬೆಲ್ಲವು ಸುಖ–ದು:ಖ, ರಾತ್ರಿ–ಹಗಲು ಇವುಗಳ ಸಂಕೇತ. ಮನುಷ್ಯನ ಬದುಕಿನಲ್ಲಿ ಸುಖ–ದು:ಖಗಳು ಅವಿಭಾಜ್ಯ ಅಂಶಗಳು. ಇವೆಲ್ಲವುಗಳೊಂದಿಗೆ ಸಮತೋಲನ ಕಾಯ್ದುಕೊಂಡೇ ಬದುಕಬೇಕು. ಇದನ್ನು ಕಲಿಯಲೆಂದೇ ಯುಗಾದಿಯಲ್ಲಿ ಬೇವು ಬೆಲ್ಲವನ್ನು ತಿನ್ನುವ ಸಂಪ್ರದಾಯ.

ಭಾರತ ದೇಶದ ಎಲ್ಲ ಭಾಗಗಳಲ್ಲಿಯೂ ಆಚರಿಸಲ್ಪಡುತ್ತಿರುವ ಮಹಾಪರ್ವ ಇದು. ಪ್ರತಿಯೊಂದು ಹಬ್ಬಕ್ಕೂ ದೈವಿಕ ಹಿನ್ನೆಲೆ ತನ್ನದೇ ಆದ ಮಹತ್ವವಿರುತ್ತದೆ. ಆಚರಣೆಯನ್ನು ತಿಳಿದುಕೊಂಡು ಮಾಡಬೇಕು. ಅರಿವಿನಿಂದ ಮಾಡಿದ ಕರ್ಮವೇ ಉತ್ತಮ ಫಲವನ್ನು ನೀಡುತ್ತದೆ. 'ಯದೇವ ವಿದ್ಯಯಾ ಕರೋತಿ, ತದೇವ ವೀರ್ಯವತ್ತರಂ ಭವತಿ'. ಅರಿವಿಲ್ಲದೇ ಮಾಡಿದಕರ್ಮವು ನಿಷ್ಫಲವಾಗುವುದು. ಅಥವಾ ಕೆಲವೊಮ್ಮೆ ಅಪಾಯವನ್ನೂ ತರಬಹುದು. ಮಾನವಜೀವನ ಸಾರ್ಥಕತೆಗಾಗಿ ನೆಮ್ಮದಿಗಾಗಿ, ಉತ್ಸಾಹದಿಂದ ಜೀವನವನ್ನು ನಡೆಸುವುದಕ್ಕಾಗಿ, ಭಗವದರ್ಪಣೆಗಾಗಿ ನಮ್ಮ ಪೂರ್ವಿಕರು ಕಂಡುಕೊಂಡ ಉಪಾಯಗಳು ಈ ಹಬ್ಬಹರಿದಿನಗಳು. ಸೃಷ್ಟಿಕರ್ತನ ಸೃಷ್ಟಿವಿಸ್ಮಯವನ್ನು ನೋಡಿ ಆನಂದಪಡುತ್ತ, ಅಹಂಕಾರ ಪ್ರದರ್ಶಿಸದೇ, ಸ್ವಾರ್ಥಜೀವನ ನಡೆಸದೇ ಸದಾ ಜಗನ್ನಿಯಾಮಕನಾದ ಭಗವಂತನ್ನು ಸ್ಮರಿಸುತ್ತ ನಿಮಿತ್ತಮಾತ್ರರಾಗಿ ನಾವು ಬದುಕನ್ನು ಸಾಗಿಸಬೇಕಿದೆ.

**ದಿವಸದಿಂ ದಿವಸಕ್ಕೆ ನಿಮಿಷದಿಂ ನಿಮಿಷಕ್ಕೆ**
**ಭವಿಷಿಯವ ಚಿಂತಿಸದೇ ಬದುಕ ನೂಕುತಿರು ।**
**ವಿವರಗಳ ಜೋಡಿಸುವ ಯಜಮಾನ ಬೇರಿಹನು**
**ಸವೆಸು ನೀಂ ಜನುಮವನು – ಮಂಕುತಿಮ್ಮ ॥**

ಎಂದು ದಾರ್ಶನಿಕರೂ ಕವಿಶ್ರೇಷ್ಠರೂ ಆದ ಡಿ. ವಿ. ಗುಂಡಪ್ಪನವರು ಬಣ್ಣಿಸಿದಂತೆ: ನಿಮಿಷದಿಂದ ನಿಮಿಷಕ್ಕೆ, ದಿನದಿಂದ ದಿನಕ್ಕೆ ಭವಿಷ್ಯದ ಬಗ್ಗೆ ಚಿಂತಿಸದೇ ಬದುಕನ್ನು ನೂಕುತ್ತಿರು. ಆ ಭವಿಷ್ಯದ ವಿವರವನ್ನು ಜೋಡಿಸುವವನು ಭಗವಂತ. ಅವನ ಮೇಲೆ ಭಾರಹಾಕಿ ನಿನ್ನ ಜನುಮವನ್ನು ಸಾಗಿಸು. ಶ್ರೀ ಕ್ರೋಧಿನಾಮ ಸಂವತ್ಸರವು ಸಕಲರಿಗೂ ಸನ್ಮಂಗಲವನ್ನುಂಟುಮಾಡಲಿ. ●

ಮನುಷ್ಯನು ತನ್ನ ಜೀವನದಲ್ಲಿ ದೀಪವಾಗಲಿ ಅಥವಾ ಕನ್ನಡಿಯಾಗಲಿ ಆಗಬೇಕು. ಕಾರಣ ಒಂದು ಬೆಳಕು ನೀಡಿದರೆ ಇನ್ನೊಂದು ಅದನ್ನು ಪ್ರತಿಫಲಿಸುತ್ತದೆ. ಎಲ್ಲರಿಗೂ ದೀಪವಾಗಲು ಸಾಧ್ಯವಾಗದಿರಬಹುದು. ಆದರೆ ಕನ್ನಡಿಯಾಗಬಹುದು.ತಮಗೆ ತಿಳಿದ ಜ್ಞಾನವನ್ನು ಮತ್ತು ಸಂತಸವನ್ನು ಇತರರಿಗೆಲ್ಲ ಹಂಚುವುದೇ ಜೀವನ.

**ಹೆಣ್ಣು ಮಕ್ಕಳ ಮೇಲೆ ನಿರಾತಂಕವಾಗಿ ನಡೆಯುತ್ತಿರುವ ಅತ್ಯಾಚಾರ, ಕೊಲೆ, ದೌರ್ಜನ್ಯದ ಫಲವಾಗಿ ಕಾಡು, ರೋಡು, ಫ್ರಿಡ್ಜ್, ಸೂಟಕೇಸಿನಲ್ಲಿ ಹೆಣವಾಗಿ ಸಿಕ್ಕಾಗ ತಂದೆ ತಾಯಿಗಳು ಅನುಭವಿಸುವ ನೋವು, ಸಂಕಟಕ್ಕೆ ಶೀಘ್ರ ಪರಿಹಾರ ಯೋಜಿಸಬೇಕಾದವರಾರು.... ಸಮಸ್ಯೆಯ ಮೂಲ ಅರಿತು ಜಾಗೃತರಾಗಬೇಕಾದವರಾರು....**

# ಮರಣ ಮೃದಂಗ

ವಾಲಗದ ನೀನಾದವಿರಬೇಕಾದೆಡೆ।
ಮರಣ ಮೃದಂಗದ ಕರ್ಕಶತೆ ।
ಜರತಾರಿ ಸೀರೆ ಆಭರಣಧರಿಸಬೇಕಾದೆಡೆ।
ಬ್ಯಾಂಡೇಜು ಪಟ್ಟಿ ಶ್ವೇತ ವಸ್ತ್ರದ ಹೊದಿಕೆ॥

ಅರಿಶಿಣ ಮೆಹಂದಿ ರಂಗು ಅರಳಬೇಕಾದೆಡೆ।
ಹರಿವ ರುಧಿರದಲಿ ಕೊಚ್ಚಿರುವ ಅಂಗ।

ಹಸಿರು ಚಪ್ಪರ ಹಂದರಗಂಬ ನೆಡಬೇಕಾದೆಡೆ।
ಒಡೆದ ಮಡಿಕೆ ತಡಿಕೆ ಸೂತಕದನೆರಳು।1।

ಸಂತಸದ ಹೂಕುಂಡಸಿಡಿಯಬೇಕಾದೆಡೆ।
ಕುಡಿಕೆಯಲ್ಲಿ ಕುರುಳು ಕೆಂಡದ ಧೂಮ।

ಮಂಗಳಾಕ್ಷತೆ ಆಶೀರ್ವಚನವಿರಬೇಕಾದೆಡೆ
ಬಿಳಿ ಅಕ್ಕಿ ಕರಿಎಳ್ಳ ತರ್ಪಣದ ಎಡೆ।

ಹೋಮದಗ್ನಿ ಸುತ್ತ ಹೆಜ್ಜೆಯಿಡಬೇಕಾದೆಡೆ
ಅಗ್ನಿಕೂಪದಲಿ ದಹಿಸಿ ಭಸ್ಮವಾದೆ ಹಿಡಿ।

ದಿಬ್ಬಣದಿ ಕನಸ ಮನೆ ಸೇರಬೇಕಾದೆಡೆ।
ಬಿದಿರ ಬಂಡಿಯಲಿ ಮಸಣಕೆ ಮೆರವಣಿಗೆ॥

ತೊಟ್ಟಿಲೊಳು ಬೆಳೆಸಿದ ಕಂದನ/ ಚಟ್ಟದೊಳು ನೋಡಿ
ಆಕ್ರಂದನ/ ಮಾತ ಮುತ್ತು ಉದುರಿಸುವವಳು ।
ಮೌನವನು ಹೊದ್ದು ಮಲಗಿರುವಳಿಂದು।

ಎದೆಯಲ್ಹೊತ್ತು ಬೆಳೆಸಿದ ಮಗುವು।
ಹೊರಟಿಹಳು ಪರಿಜನರ ಭುಜದ ಮೇಲಿಂದು।

ನವಮಾಸ ಹೊತ್ತು ಹೆತ್ತ ಕೂಸನು।
ಬಾರಿ ಬಾರಿ ಕೊಚ್ಚಿ ಬೀಗಿದ ದುರುಳನು॥3

ಹತ್ಯಾಚಾರಿ ಕಟುಕರಿಗೆ ಶಿಕ್ಷೆಯಂತೋ॥
ಬದುಕಿಗಿಟ್ಟಕೊಳ್ಳಿ ಆರುವದಿನ್ನೆಂದೋ॥

ಶ್ರೀಮತಿ ಸುನೀತಾ ಎ. ಗಂಗಾಧರಾಚಾರಿ

ಸತ್ಪುರುಷರು ವಸಂತ ಋತುವಿನಂತೆ ಲೋಕಕಲ್ಯಾಣವನ್ನು ಮಾಡುತ್ತಾ ಇರುತ್ತಾರೆ. – ಶಂಕರಾಚಾರ್ಯ.

# ಬಸವೇಶ್ವರರು–ಸಾಮಾಜಿಕ ಸಾಮರಸ್ಯದ ಹರಿಕಾರ



ಹನ್ನೆರಡನೇ ಶತಮಾನ ಹಲವು ಬದಲಾವಣೆಗಳ ಕಾಲ. ಸಾಮಾಜಿಕವಾಗಿ, ಧಾರ್ಮಿಕವಾಗಿ, ಸಾಹಿತ್ಯಿಕವಾಗಿ ಹಲವು ಬದಲಾವಣೆಗಳನ್ನು, ಜೊತೆಗೆ ಸುಧಾರಣೆಗಳನ್ನೂ ಕಂಡ ಕಾಲ. ಏಕೆಂದರೆ ಅದು ಧಾರ್ಮಿಕವಾಗಿ ಬದಲಾವಣೆಗೆ ತೆರೆದುಕೊಳ್ಳುತ್ತಿದ್ದ ಕಾಲ. ಜೈನ ಧರ್ಮದ ಪ್ರಾಬಲ್ಯವು ಕಡಿಮೆಯಾಗುತ್ತಿದ್ದು ವೀರಶೈವ ಧರ್ಮವು ಮುನ್ನೆಲೆಗೆ ಬರುತ್ತಿದ್ದ ಕಾಲವೂ ಆಗಿತ್ತು. ಸಾಹಿತ್ಯವು ಶಿಷ್ಟವರ್ಗದಿಂದ ಜನ ಸಾಮಾನ್ಯ ವರ್ಗದ ಕಡೆಗೆ ವಾಲುತ್ತಿದ್ದ ಕಾಲವೂ ಆತತ್ತು.. ಅಂದರೆ ಸಾಹಿತ್ಯವೆನ್ನುವುದು ಕೇವಲ ಪುರಾಣಗಳ, ಧಾರ್ಮಿಕ ವಿಚಾರಗಳ ಪ್ರಸಾರಕ್ಕೆ ಮಾತ್ರ ತೆರೆದುಕೊಳ್ಳದೆ, ಪಂಡಿತರಿಗೆ ಮಾತ್ರವೇ ಮೀಸಲಾಗದೆ, ರಾಜಾಸ್ಥಾನಗಳಿಗಷ್ಟೇ ಸೀಮಿತವಾಗದೆ ಜನಸಾಮಾನ್ಯರ ಜೀವನವನ್ನೂ ಸಹ ಪ್ರವೇಶಿಸಿ ಪ್ರತಿನಿಧಿಸಬೇಕೆಂಬ ಅಭಿಮತ ಜನರಲ್ಲಿ ವ್ಯಕ್ತವಾಗುತ್ತಿತ್ತು. ಸಾಹಿತ್ಯ ರಚನೆಯೂ ಸಹ ಪಾಂಡಿತ್ಯಪೂರ್ಣವೇ ಆಗಿರದೆ, ಜನಸಾಮಾನ್ಯರ ಭಾಷೆಯಲ್ಲಿ, ಅವರದೇ ಭಾವನೆಗಳನ್ನು ಯಾವುದೇ ಶಾಸ್ತ್ರದ ನಿಯಮವಿಲ್ಲದೆ ರಚನೆಯಾಗಬೇಕೆಂಬ ಅಭಿಲಾಷೆಯೂ ಜನರಲ್ಲಿ ಮೂಡುತ್ತಿತ್ತು. ಫಲವಾಗಿ ಇಂತಹ ಹತ್ತಾರು ಬದಲಾವಣೆಗಳಿಗೋಸ್ಕರ ಅಲ್ಲಲ್ಲಿ ಕ್ರಾಂತಿಯ ಲಕ್ಷಣಗಳು ಚಿಗುರಿ, ಚೆನ್ನಾಗಿಯೇ ಬೇರೂರುತ್ತಿದ್ದ ಕಾಲವಾಗಿತ್ತು. ಜಾತಿ ತಾರತಮ್ಯ, ಸ್ತ್ರೀ –ಪುರುಷರಲ್ಲಿ ಪಕ್ಷಪಾತ, ಶಿಕ್ಷಿತ –ಅಶಿಕ್ಷಿತರ ನಡುವೆ ಭೇದಭಾವ ಮುಂತಾದ ಹಲವು ವಿಚಾರಗಳಿಗೆ ಸಂಬಂಧಿಸಿದಂತೆ ಕಲಹಗಳು, ಸಮಸ್ಯೆಗಳು ತಲೆದೋರುತ್ತಿದ್ದು ಶೋಷಿತರ ಸಂಖ್ಯೆ ಹೆಚ್ಚುತ್ತಿತ್ತು. ಬದಲಾವಣೆಗಾಗಿ ಕ್ರಾಂತಿಕಾರಕ ಚಟುವಟಿಕೆಗಳು ತಲೆಯೆತ್ತುತ್ತಿದ್ದವು. ವಚನಕಾರರು ಈ ಯುಗದಲ್ಲಿ ಸಮಾಜದ ಸುಧಾರಕರಾಗಿಯೂ ಸಾಮಾಜಿಕ ಸಾಮರಸ್ಯದ ಹರಿಕಾರರಾಗಿಯೂ ತಮ್ಮ ಅನನ್ಯ ಕೊಡುಗೆಯನ್ನು ನೀಡಿದ ಮಹಾನ್ ಚೇತನಗಳೆನಿಸಿಕೊಂಡರು. ಶಿವಭಕ್ತರಾಗಿ, ಶೈವಧರ್ಮದ ಪ್ರಚಾರದೊಂದಿಗೆ ಜನರಲ್ಲಿ ಆಧ್ಯಾತ್ಮಿಕತೆಯನ್ನೂ, ವೈಚಾರಿಕತೆಯನ್ನೂ ಸಮಾನವಾಗಿಯೇ ಬೆಳೆಸುತ್ತ ಅವರ ಸರ್ವತೋಮುಖ ವ್ಯಕ್ತಿತ್ವದ ಬೆಳವಣಿಗೆಗೆ ನೀರೆರೆಯುತ್ತ ಪ್ರೋತ್ಸಾಹಿಸಿದರು. ಹಾಗಾಗಿಯೇ ಹನ್ನೆರಡನೇ ಶತಮಾನ ನಮ್ಮ ಚರಿತ್ರೆಯ ಪುಟಗಳಲ್ಲಿ ಮಹತ್ವದ ಸ್ಥಾನವನ್ನು ಪಡೆದುಕೊಂಡಿದೆ. ಸಾಹಿತ್ಯದ ದೃಷ್ಟಿಯಿಂದಲೂ ಪ್ರಮುಖ ಕಾಲಘಟ್ಟವೆನಿಸಿಕೊಂಡಿದೆ.

ಈ ಕಾಲದಲ್ಲಿ ಬಂದವರು ಬಸವೇಶ್ವರರು. ಭಕ್ತಿಭಂಡಾರಿ, ಕ್ರಾಂತಿಕಾರಿ, ಸಮಾಜ ಸುಧಾರಕ ಇತ್ಯಾದಿ ಅನೇಕ ಗುಣವಾಚಕಗಳಿಂದ ಇವರನ್ನು ಗುರುತಿಸಲಾಗುತ್ತದೆ. ಇವರಿಗಿಂತ ಹಿರಿಯರಾಗಿ ಅಲ್ಲಮಪ್ರಭುವೇ ಮೊದಲಾದ ಹಲವಾರು ವಚನಕಾರರಿದ್ದರೂ ಬಸವಣ್ಣನವರ ಹೆಸರು ವಿಶೇಷ ಮಾನ್ಯತೆಯನ್ನು ಹೊಂದಿದೆ. ಕಾರಣ, ಅವರ ನೇತೃತ್ವದಲ್ಲಿ ನಡೆದ ಬದಲಾದ ಸಾಮಾಜಿಕ ಆಚರಣೆಗಳು ಇಡೀ ರಾಜ್ಯದಲ್ಲಿ ಕ್ರಾಂತಿಯನ್ನೇ ಉಂಟುಮಾಡಿದ್ದವು. ಬಿಜ್ಜಳನೆಂಬ ರಾಜನ ಆಸ್ಥಾನದಲ್ಲಿದ್ದರೂ ಸ್ಥಾನಮಾನದ ಹಿರಿಮೆಯನ್ನು ಎಣಿಸದೆ ಎಲ್ಲರ ಪ್ರೀತಿಯ ಅಣ್ಣ ಬಸವಣ್ಣನೆನಿಸಿದರು. ಭಕ್ತಿಭಂಡಾರಿಯೆನಿಸಿ, ಜನರಲ್ಲಿ ಧರ್ಮಪ್ರಜ್ಞೆಯನ್ನೂ, ವಿಚಾರ ಶಕ್ತಿಯನ್ನೂ, ಆತ್ಮವಿಶ್ವಾಸವನ್ನೂ ತುಂಬುತ್ತ ಜನಾನುರಾಗಿಯಾದರು. ಜಾತಿಭೇದವನ್ನು ಎಣಿಸದೆ ಉಚ್ಚ–ನೀಚಕುಲದವರ ನಡುವೆ (ಮಧುವರಸ–ಹರಳಯ್ಯ ಕುಟುಂಬದಲ್ಲಿ) ವಿವಾಹದ ಬಂಧನ ಕಾರ್ಯವನ್ನು ಮುಂದಾಗಿ ನಿಂತು ನಡೆಸಿದ್ದರು. ಅದುವೇ ಅಂತಹ ಹಲವಾರು ಘಟನೆಗಳಿಗೆ ಪ್ರೇರಣೆ ನೀಡಿತ್ತು. ಅವರು ಬದುಕಿನಲ್ಲಿ ಸಾಮರಸ್ಯದ ಅಗತ್ಯವನ್ನು ಕಲಿಸಿದರು. ಅನುಭವ ಮಂಟಪವೆಂಬ ತಮ್ಮ ಮಹಾ ಮನೆಯಲ್ಲಿ ನಡೆಯುತ್ತಿದ್ದ ಅನ್ನದಾಸೋಹ ಮತ್ತು ಜ್ಞಾನ ದಾಸೋಹಗಳಲ್ಲಿ ಪಾಲ್ಗೊಳ್ಳಲು ಎಲ್ಲ ಜಾತಿಯವರಿಗೆ, ಸ್ತ್ರೀ, ಪುರುಷರೆಂಬ ಭೇದವಿಲ್ಲದೆ ಅವಕಾಶ ಮಾಡಿಕೊಟ್ಟಿದ್ದರು. ಅನಕ್ಷರಸ್ಥರಾದವರೂ ಸಹ ತಮ್ಮ ತಮ್ಮ ಜೀವನಾನುಭವದೊಂದಿಗೆ ಅಕ್ಷರದಾಸೋಹದಲ್ಲಿ ಭಾಗಿಯಾಗಲು ಪ್ರೋತ್ಸಾಹಿಸಿದ್ದರು. ಆ ಮೂಲಕ ಶಿವಭಕ್ತಿಯನ್ನು ಜನರಲಿ ಮೂಡಿಸುವುದರೊಂದಿಗೆ ಮಾನವ ಧರ್ಮದ ಪಾಲನೆಯನ್ನು ಕುರಿತು ಅರಿವು ಮೂಡಿಸಿದರು. ನಾನಾ ವೃತ್ತಿಗಳಲ್ಲಿ ತೊಡಗಿದ್ದವರು ತಮಗೆ ತಿಳಿದಂತೆ ವಚನ ಸಾಹಿತ್ಯದ ಭಂಡಾರಕ್ಕೆ ತಮ್ಮ ಕೊಡುಗೆಯನ್ನು ನೀಡಿದರು. ಅಂಬಿಗರ ಚೌಡಯ್ಯ, ಗಜೇಶ ಮಸಣಯ್ಯ, ಆಯ್ದಕ್ಕಿಮಾರಯ್ಯ, ಕುಂಬಾರಚೆನ್ನಯ್ಯ, ಚಮ್ಮಾರಚೆನ್ನಯ್ಯ, ಮಡಿವಾಳಮಾಚಯ್ಯ ಮಾತ್ರವಲ್ಲದೆ ಆಯ್ದಕ್ಕಿಲಕ್ಕಮ್ಮ, ದುಗ್ಗವ್ವೆ, ದುಗ್ಗಳೆ, ನೀಲಾಂಬಿಕೆ, ಗಂಗಾಂಬಿಕೆ ಮುಂತಾದವರಿಂದ ಸ್ತ್ರೀ ಸಾಹಿತ್ಯ ರಚನೆಗೂ ಪ್ರೋತ್ಸಾಹ ನೀಡಿದ್ದಲ್ಲದೆ ಅಕ್ಕಮಹಾದೇವಿಯಂತಹ ಜ್ಞಾನಜ್ಯೋತಿಯನ್ನು ಅನುಭವ ಮಂಟಪದಲ್ಲಿ ಮತ್ತಷ್ಟು ಬೆಳಗಿಸಿದ ಕಾರ್ಯವನ್ನು ಮಾಡಿದರು. ಕನ್ನಡ ಸಾಹಿತ್ಯ ಲೋಕದಲ್ಲಂತೂ ಬಸವಣ್ಣನವರನ್ನುಅನುಸರಿಸಿ ನಡೆದ ಈ ವಚನ ಕ್ರಾಂತಿಯು ಬಹುಮುಖ್ಯವಾದುದು. ಸಾಹಿತ್ಯ ರಚನೆಯ ಶೈಲಿಯಲ್ಲಿ, ಭಾಷೆಯಲ್ಲಿ ವಸ್ತು ವೈವಿಧ್ಯದಲ್ಲಿ ಬಳಸಿದ ಸಾಮಾನ್ಯರ ಬದುಕಿನ ಸಾಮಾನ್ಯಅಂಶಗಳಲ್ಲಿ – ಹೀಗೆ ಎಲ್ಲವೂ ಸಾಹಿತ್ಯ ಪ್ರಪಂಚದಲ್ಲಿ ಹೊಸ ಅಧ್ಯಾಯವನ್ನೇ ಬರೆದಿತ್ತು. ಸಮಾಜವು ಸಮಾನತೆಯ, ಸಾಮರಸ್ಯದ ಬದುಕಿನ ಪರಿಚಯವನ್ನು ಮಾಡಿಕೊಳ್ಳುವಂತಾಗಿ ಹನ್ನೆರಡನೇ ಶತಮಾನವು ಬದುಕಿನ ಒಂದು ಹೊಸ ರೂಪಕ್ಕೆ ತೆರೆದುಕೊಂಡಿತ್ತು. ಅದೇ ಭವಿಷ್ಯದಲ್ಲಿ ಒಂದು ಮಾರ್ಗಸೂಚಿಯಾಗಿ ನಂತರದಲ್ಲಿ ಬಂದ ಕನ್ನಡ ಸಾಹಿತ್ಯದ ಕವಿಗಳು ತಮ್ಮ ರಚನೆಗಳನ್ನು ಮಾಡುವಾಗ ಅನೇಕ ಸ್ವತಂತ್ರ ರೂಪಗಳನ್ನು ಅಳವಡಿಸಿಕೊಳ್ಳಲು ಸಾಧ್ಯವಾಗಿತ್ತು. ನಂತರದಲ್ಲಿ ಬಂದ ವೈಷ್ಣವ ಧರ್ಮದ ಅನುಯಾಯಿಗಳು ವಚನಕಾರರಂತೆಯೇ ಅಭಿವ್ಯಕ್ತಿಯಲ್ಲಿ ಸರಳತೆಯೊಂದಿಗೆ, ಧರ್ಮ, ನೀತಿಗಳ ಉಪದೇಶವನ್ನು ಭಕ್ತಿ ಪ್ರಸಾರವನ್ನು ಮಾಡಲು ಸಾಹಿತ್ಯದ ಮಾಧ್ಯಮವನ್ನು ಬಳಸಿಕೊಂಡರು. ಕೀರ್ತನಕಾರರು ವಚನಕಾರರಂತೆಯೇ ಸಮಾಜಕ್ಕೆ ಮಾರ್ಗದರ್ಶನವನ್ನು ಮಾಡುವಲ್ಲಿ ತಮ್ಮ ದಾರಿಯನ್ನು ಕಂಡುಕೊಳ್ಳಲು ಹನ್ನೆರಡನೇ ಶತಮಾನದ ಬಸವಣ್ಣನವರ ಚಿಂತನೆಗಳು, ಅವರು ಕೈಕೊಂಡ ಕ್ರಾಂತಿಕಾರಕ ಚಟುವಟಿಕೆಗಳು ಮುಂದಿನವರಿಗೆ ಆದರ್ಶಪ್ರಾಯವೆನಿಸಿದುವು. ಅವರ ಅತ್ಯಂತ ಸರಳ ಆದರೆ ಸಾರ್ವಕಾಲಿಕ ಜೀವನ ಮೌಲ್ಯಗಳನ್ನು ತಿಳಿಸುವ ಒಂದು ಪ್ರಸಿದ್ಧ ವಚನವನ್ನು ಇಲ್ಲಿ ಪ್ರಸ್ತುತ ಪಡಿಸಬಹುದು.

ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ, ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ, ಅನ್ಯರಿಗೆ ಅಸಹ್ಯ ಪಡಬೇಡ, ಇದೇ ಅಂತರಂಗಶುದ್ಧಿ, ಇದೇ ಬಹಿರಂಗ ಶುದ್ಧಿ, ಇದೇ ನಮ್ಮ ಕೂಡಲಸಂಗನ ಒಲಿಸುವಪರಿ।

–ಚಾರುಮತಿ

MAG(3)/NPP/23/2020-21 Registered No. RNI 45459/85 Posted at Bangalore PSO Bangalore -560 026
Date of Publishing : 17-05-2024 Date of Posting 20th or 21st of every month Posted at Periodical Rate

# ಕಲಬುರಗಿ : ನೂತನ ಜಿಲ್ಲಾ ಪದಾಧಿಕಾರಿಗಳ ಪ್ರಥಮ ಸಂಘಟನಾತ್ಮಕ ಸಭೆ



ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಜಿಲ್ಲಾ ಘಟಕ ಕಲಬುರಗಿಯ ನೂತನ ಜಿಲ್ಲಾ ಪದಾಧಿಕಾರಿಗಳ ಪ್ರಥಮ ಸಂಘಟನಾತ್ಮಕ ಸಭೆ ದಿನಾಂಕ 29.03.2024ರಂದು ನಡೆಯಿತು. ತಾಲೂಕು ಘಟಕಗಳ ರಚನೆಯ ಕುರಿತು ಹಾಗೂ ಬರುವ ಶೈಕ್ಷಣಿಕ ವರ್ಷದಲ್ಲಿ ನಡೆಸಬಹುದಾದ ಶೈಕ್ಷಣಿಕ ಹಾಗೂ ಹೋರಾಟಾತ್ಮಕ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಿ ನಿರ್ಣಯವನ್ನು ಕೈಗೊಳ್ಳಲಾಯಿತು. ಸಭೆಯು ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಶ್ರೀಪಾಲ ಭೋಗಾರ ಅವರ ಸ್ವಾಗತದೊಂದಿಗೆ ಆರಂಭವಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾ ಘಟಕದ ಅಧ್ಯಕ್ಷರಾದ ಶ್ರೀ ಸಂಜು ಕುವಾರ್ ಪಾಟೀಲ್ ವಹಿಸಿದ್ದರು. ಶಾಂತಿ ಮಂತ್ರದೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

# ತುಮಕೂರು : ಜಿಲ್ಲಾ ನೂತನ ಪದಾಧಿಕಾರಿಗಳ ಆಯ್ಕೆ



ದಿನಾಂಕ 16–3–24ರಂದು ತುಮಕೂರಿನ ಕನ್ನಡ ಭವನದಲ್ಲಿ – ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಜಿಲ್ಲಾ ಪದಾಧಿಕಾರಿಗಳ ಹಾಗು ಸರ್ವಸದಸ್ಯರ ಸಭೆ ನಡೆಸಲಾಯಿತು.ಈ ಸಭೆಯಲ್ಲಿ ಜಿಲ್ಲಾ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

**ಗೌರವಾಧ್ಯಕ್ಷರು** – ಶ್ರೀ ಕೆ. ಎಸ್. ಸಿದ್ಧಲಿಂಗಪ್ಪ, **ಅಧ್ಯಕ್ಷರು** – ಶ್ರೀ ಯೋಗಾನಂದ. ಎಸ್., ;

**ಉಪಾಧ್ಯಕ್ಷರು** – 1. ಶ್ರೀ ಜಗದೀಶ ಕಣಕಾಲ, 2. ಶ್ರೀಮತಿ ಅಕ್ಕಮ್ಮ, 3. ಶ್ರೀ ಹೆಚ್. ಆರ್. ಗಂಗಾಧರಯ್ಯ, 4. ಶ್ರೀ ಗಂಗಾಧರ ;

**ಪ್ರಧಾನಕಾರ್ಯದರ್ಶಿ** – ಶ್ರೀ ಅಜಯ್ ಕುಮಾರ್ ; **ಖಜಾಂಚಿ** – ಶ್ರೀ ಸತ್ಯಪ್ರಕಾಶ್ ;

**ಕಾರ್ಯದರ್ಶಿಗಳು** – 1. ಶ್ರೀ ಡಿ. ಕೆ. ರಾಮಕೃಷ್ಣಯ್ಯ, 2. ಶ್ರೀಮತಿ ಬಿ. ಲೀಲಾ, 3. ಶ್ರೀ ಜಗದೀಶ್ ಹೆಚ್. ಎಲ್., 4. ಶ್ರೀ ಕೆ. ಎಸ್. ತೇಜಸ್ವಿ

**ಸಂಘಟನಾ ಕಾರ್ಯದರ್ಶಿ** – ಶ್ರೀ ಹೆಚ್. ಎಸ್. ನಿಜಗುಣಯ್ಯ

**ಕಾರ್ಯಕಾರಿಣಿ ಸದಸ್ಯರು** – 1. ಶ್ರೀ ರಂಗಸ್ವಾಮಯ್ಯ, 2. ಶ್ರೀ ಯೋಗೀಶ್ ಎ., 3. ಶ್ರೀ ಗಂಗಾಧರಯ್ಯ ಕೆ. ಎಂ., 4. ಶ್ರೀ ನಿಜಾನಂದ ಮೂರ್ತಿ. 5. ಶ್ರೀ ವೆಂಕಟೇಶ ಬಾಬು, 6. ಶ್ರೀ ನಾಗರಾಜ, 7. ಶ್ರೀ ಜನಾರ್ಧನಯ್ಯ ಜಿ. ಆರ್., 8. ಶ್ರೀ ಮಂಜಣ್ಣ ಎಸ್. ಎಸ್., 9. ಶ್ರೀ ಚಿದಾನಂದ ಸ್ವಾಮಿ ಜಿ.

ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಅಧ್ಯಕ್ಷರು ಹಾಗೂ ಮಾಧ್ಯಮಿಕ ಶಿಕ್ಷಕ ಸಂಘದ ಜಿಲ್ಲಾ ಅಧ್ಯಕ್ಷರೂ ಆದ ಶ್ರೀ ಸಿದ್ಧಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ನಡೆದ ಈ ಸಭೆಯಲ್ಲಿ ರಾಜ್ಯ ಸಂಘಟನಾ ಕಾರ್ಯದರ್ಶಿಯರಾದ ಶ್ರೀ ವೃಷಭೇಂದ್ರ ಸ್ವಾಮಿ ಹಾಗೂ ವಿಭಾಗ ಪ್ರಮುಖರಾದ ಶ್ರೀ ಉಮೇಶ್ ರವರು ಉಪಸ್ಥಿತರಿದ್ದು ಸಭೆ ಯಶಸ್ವಿಯಾಗಿ ನಡೆಯಲು ಸಹಕರಿಸಿದರು.

## ಗಮನಿಸಿ

ಕಾರ್ಯಕ್ರಮ ಮತ್ತು ಚಿತ್ರದ ವರದಿಗಳನ್ನು, ಕಾರ್ಯಕ್ರಮ ನಡೆಸಿದ ತಕ್ಷಣವೇ ಕಳುಹಿಸಿ ಕೊಡಿ. ನಿಮ್ಮ ಯಾವುದೇ ಬರಹಗಳು, ವರದಿಗಳನ್ನು 'ನುಡಿ'ಯಲ್ಲಿ ಕಂಪೋಸಿಂಗ್ ಮಾಡಿ ಫೋಟೋ ಸಹಿತ

**akss1950@gmail.com**

ಇ–ಮೇಲ್‌ಗೆ ಕಳುಹಿಸಿಕೊಡಿ

## ಶಿಕ್ಷಕ ಸಮಾಚಾರ ತರಿಸಲು ಇಲಾಖೆಯ ಆದೇಶ

D.P.I. (Special) ಅವರ ಆದೇಶ ಸಂಖ್ಯೆ T3-LBS-RKM-7/79-80 ದಿನಾಂಕ 20–6–1980ರ ಪ್ರಕಾರ ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳು, ಹೈಸ್ಕೂಲುಗಳು, ಜ್ಯೂನಿಯರ್ ಕಾಲೇಜುಗಳು ಮತ್ತು ಶಿಕ್ಷಕರ ತರಬೇತಿ ಸಂಸ್ಥೆಗಳು (I.T.I.) ತಮ್ಮ ವಾಚನಾಲಯ ಅಥವಾ ಪುಸ್ತಕಾಲು ನಿಧಿಯಿಂದ 'ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ' ಚಂದಾ ಪಾವತಿ ಮಾಡಬಹುದು.

IF UNDELIVERED PLEASE RETURN TO SENDER

Printed By :
J. M. Joshi
Karnataka Rajya Madhyamika Shikshaka Sangha ®.)
Published By:
J. M. Joshi
Karnataka Rajya Madhyamika Shikshaka Sangha (R.)
Owned By : J. M. Joshi
on behalf of Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, 'Yadavasmurthi', 1st Main, Sheshadripuram, Bengaluru -560 020

Editor : J. M. Joshi, Karnataka Rajya Madhyamika Shikshaka Sangha (R.), Bengaluru -20

srushtidesigns@gmail.com